सत्यमेव जयते

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಗ್ರಾಮ ನ್ಯಾಯಾಲಯಗಳ ಅಧಿನಿಯಮ, 2008

**(2009ರ ಅಧಿನಿಯಮ ಸಂಖ್ಯೆ 4)**
**[25ನೇ ಏಪ್ರಿಲ್, 2011 ರಂದು ಜಾರಿಯಲ್ಲಿದ್ದಂತೆ]**

# THE GRAMA NYAYALAYAS ACT, 2008

**(Act No. 4 of 2009)**
**[As on 25th April, 2011]**

# ಮುನ್ನುಡಿ

25.04.2011 ರಂದು ಜಾರಿಯಲ್ಲಿದ್ದಂತೆ, ದಿ ಗ್ರಾಮ ನ್ಯಾಯಾಲಯಾಸ್ ಆ್ಯಕ್ಟ್, 2008 (2009ರ 4) – ಇದರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 25.04.2011 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 45ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 138 ರಿಂದ 152 ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

**ವಿ.ಕೆ. ಭಸೀನ್**
ನವದೆಹಲಿ ಕಾರ್ಯದರ್ಶಿ
ದಿನಾಂಕ: ಭಾರತ ಸರ್ಕಾರ.

## PREFACE

This edition of the Grama Nyayalayas Act, 2008 (4 of 2009) as on the 25.04.2011 contains the authoritative text of that Act in Kannada which was published in the Gazette of India Extraordinary, Part IX, Section 1, No.1, Vol. 45, dated 25.04.2011 on pages 138 to 152.
.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

New Delhi **V.K. BHASIN**
Date : Secretary,
Government of India.

# ಗ್ರಾಮ ನ್ಯಾಯಾಲಯಗಳ ಅಧಿನಿಯಮ, 2008

## ಪ್ರಕರಣಗಳ ಅನುಕ್ರಮಣಿಕೆ


ಪ್ರಕರಣಗಳು: ಪುಟಗಳು

**ಅಧ್ಯಾಯ – I**

**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ 1
2. ಪರಿಭಾಷೆಗಳು 2

**ಅಧ್ಯಾಯ– II**

**ಗ್ರಾಮ ನ್ಯಾಯಾಲಯ**

3. ಗ್ರಾಮ ನ್ಯಾಯಾಲಯಗಳ ಸ್ಥಾಪನೆ 3
4. ಗ್ರಾಮ ನ್ಯಾಯಾಲಯದ ಕೇಂದ್ರ ಕಾರ್ಯಸ್ಥಾನ 3
5. ನ್ಯಾಯಾಧಿಕಾರಿಯ ನೇಮಕ 4
6. ನ್ಯಾಯಾಧಿಕಾರಿಯ ನೇಮಕಕ್ಕೆ ಅರ್ಹತೆಗಳು 4
7. ನ್ಯಾಯಾಧಿಕಾರಿಯ ಸಂಬಳ, ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು 4
8. ನ್ಯಾಯಾಧಿಕಾರಿಯು ಯಾವ ವ್ಯವಹರಣೆಗಳಲ್ಲಿ ಅವನು ಹಿತಾಸಕ್ತಿ ಹೊಂದಿರುವನೋ ಆ ವ್ಯವಹರಣೆಯಲ್ಲಿ ಪೀಠಾಸೀನನಾಗಿರತಕ್ಕದ್ದಲ್ಲ 4
9. ನ್ಯಾಯಾಧಿಕಾರಿಯು ಗ್ರಾಮಗಳಲ್ಲಿ ಸಂಚಾರಿ ನ್ಯಾಯಾಲಯವನ್ನು ನಡೆಸುವುದು ಮತ್ತು ವ್ಯವಹರಣೆಗಳನ್ನು ನಡೆಸುವುದು 4
10. ಗ್ರಾಮ ನ್ಯಾಯಾಲಯದ ಮೊಹರು 5

**ಅಧ್ಯಾಯ – III**

**ಗ್ರಾಮ ನ್ಯಾಯಾಲಯದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರ**

11. ಗ್ರಾಮ ನ್ಯಾಯಾಲಯದ ಅಧಿಕಾರ ವ್ಯಾಪ್ತಿ 5
12. ಕ್ರಿಮಿನಲ್ ಅಧಿಕಾರವ್ಯಾಪ್ತಿ 5
13. ಸಿವಿಲ್ ಅಧಿಕಾರ ವ್ಯಾಪ್ತಿ 6
14. ಅನುಸೂಚಿಗಳನ್ನು ತಿದ್ದುಪಡಿ ಮಾಡುವ ಅಧಿಕಾರ 6
15. ಕಾಲ ಪರಿಮಿತಿ 7
16. ಇತ್ಯರ್ಥದಲ್ಲಿರುವ ವ್ಯವಹರಣೆಗಳ ವರ್ಗಾವಣೆ 7
17. ಲಿಪಿಕ ಅಧಿಕಾರಿಗಳ ಕರ್ತವ್ಯಗಳು 8

## ಅಧ್ಯಾಯ– IV
## ಕ್ರಿಮಿನಲ್ ಮೊಕದ್ದಮೆಗಳಲ್ಲಿ ಪ್ರಕ್ರಿಯೆ


18. ಕ್ರಿಮಿನಲ್ ಅಧಿವಿಚಾರಣೆಯಲ್ಲಿ ಅಧಿನಿಯಮದ ಅಧ್ಯಾರೋಹಿ ಪರಿಣಾಮ 8

19. ಗ್ರಾಮ ನ್ಯಾಯಾಲಯವು ಸಂಕ್ಷಿಪ್ತ ಅಧಿವಿಚಾರಣಾ ಪ್ರಕ್ರಿಯೆಯನ್ನು ಅನುಸರಿಸುವುದು 8

20. ಗ್ರಾಮ ನ್ಯಾಯಾಲಯದ ಮುಂದೆ ಕಡಿಮೆ ದಂಡನೆಗೆ ಕೋರಿಕೆ 9

21. ಗ್ರಾಮ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ನಡೆಸುವುದು ಮತ್ತು ಪಕ್ಷಕಾರರಿಗೆ ಕಾನೂನು ನೆರವು 9

22. ತೀರ್ಪನ್ನು ಉಚ್ಚರಿಸುವುದು 9


## ಅಧ್ಯಾಯ– V
## ಸಿವಿಲ್ ಮೊಕದ್ದಮೆಗಳಲ್ಲಿ ಪ್ರಕ್ರಿಯೆ


23. ಸಿವಿಲ್ ವ್ಯವಹರಣೆಗಳಲ್ಲಿ ಅಧಿನಿಯಮದ ಅಧ್ಯಾರೋಹಿ ಪರಿಣಾಮ 10

24. ಸಿವಿಲ್ ವಿವಾದಗಳಲ್ಲಿ ವಿಶೇಷ ಪ್ರಕ್ರಿಯೆ 10

25. ಗ್ರಾಮ ನ್ಯಾಯಾಲಯದ ಡಿಕ್ರಿಗಳ ಮತ್ತು ಆದೇಶಗಳ ಜಾರಿ 12

26. ಸಿವಿಲ್ ವಿವಾದಗಳ ಸಂಧಾನಕ್ಕಾಗಿ ಮತ್ತು ಇತ್ಯರ್ಥಕ್ಕಾಗಿ ಪ್ರಯತ್ನಿಸುವುದು ಗ್ರಾಮ ನ್ಯಾಯಾಲಯದ ಕರ್ತವ್ಯ 12

27. ಸಂಧಾನಕಾರರ ನೇಮಕ 13

28. ಸಿವಿಲ್ ವಿವಾದಗಳ ವರ್ಗಾವಣೆ 13


## ಅಧ್ಯಾಯ – VI
## ಸಾಮಾನ್ಯ ಪ್ರಕ್ರಿಯೆ


29. ವ್ಯವಹರಣೆಗಳು ರಾಜ್ಯದ ಅಧಿಕೃತ ಭಾಷೆಯಲ್ಲಿರುವುದು 14

30. ಭಾರತ ಸಾಕ್ಷ್ಯ ಅಧಿನಿಯಮ, 1872ರ ಅನ್ವಯ 14

31. ಮೌಖಿಕ ಸಾಕ್ಷ್ಯವನ್ನು ದಾಖಲಿಸುವುದು 14

32. ಔಪಚಾರಿಕ ಸ್ವರೂಪದ ಸಾಕ್ಷ್ಯವನ್ನು ಅಫಿಡಾವಿಟ್ ಮೇಲೆ ತೆಗೆದುಕೊಳ್ಳುವುದು 14

## ಅಧ್ಯಾಯ– VII

### ಅಪೀಲುಗಳು


33. ಕ್ರಿಮಿನಲ್ ಮೊಕದ್ದಮೆಗಳಲ್ಲಿ ಅಪೀಲು 15

34. ಸಿವಿಲ್ ಮೊಕದ್ದಮೆಗಳಲ್ಲಿ ಅಪೀಲು 16


## ಅಧ್ಯಾಯ – VIII

### ಸಂಕೀರ್ಣ


35. ಗ್ರಾಮ ನ್ಯಾಯಾಲಯಗಳಿಗೆ ಪೊಲೀಸರ ನೆರವು 17

36. ನ್ಯಾಯಾಧಿಕಾರಿಗಳು ಮತ್ತು ನೌಕರರು, ಮುಂತಾದವರು ಲೋಕ ನೌಕರರಾಗಿರುವುದು 17

37. ಗ್ರಾಮ ನ್ಯಾಯಾಲಯಗಳ ತಪಾಸಣೆ 18

38. ತೊಂದರೆಗಳನ್ನು ನಿವಾರಿಸಲು ಅಧಿಕಾರ 18

39. ನಿಯಮಗಳನ್ನು ರಚಿಸಲು ಉಚ್ಚ ನ್ಯಾಯಾಲಯದ ಅಧಿಕಾರ 18

40. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ 19

ಅನುಸೂಚಿ. 20

# ಗ್ರಾಮ ನ್ಯಾಯಾಲಯಗಳ ಅಧಿನಿಯಮ, 2008

## (2009ರ ಅಧಿನಿಯಮ ಸಂಖ್ಯೆ 4)

[ಜನವರಿ 7, 2009]

ನಾಗರಿಕರಿಗೆ ಅವರ ಮನೆ ಬಾಗಿಲಲ್ಲೇ ನ್ಯಾಯ ದೊರೆಯುವಂತೆ ಅವಕಾಶವನ್ನು ಕಲ್ಪಿಸುವ ಉದ್ದೇಶಕ್ಕಾಗಿ ಬೇರುಮಟ್ಟದಲ್ಲಿ ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸುವುದಕ್ಕಾಗಿ ಮತ್ತು ಯಾರೇ ನಾಗರಿಕನಿಗೆ ಸಾಮಾಜಿಕ, ಆರ್ಥಿಕ ಅಥವಾ ಇತರೆ ಅಸಮರ್ಥತೆಗಳ ಕಾರಣದಿಂದ ನ್ಯಾಯವನ್ನು ಪಡೆಯುವ ಅವಕಾಶಗಳನ್ನು ನಿರಾಕರಿಸಿಲ್ಲವೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಐವತ್ತೊಂಬತ್ತನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ – I
## ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಗ್ರಾಮ ನ್ಯಾಯಾಲಯಗಳ ಅಧಿನಿಯಮ, 2008 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು, ನಾಗಾಲ್ಯಾಂಡ್ ರಾಜ್ಯವನ್ನು, ಅರುಣಾಚಲ ಪ್ರದೇಶ ರಾಜ್ಯವನ್ನು, ಸಿಕ್ಕಿಂ ರಾಜ್ಯವನ್ನು ಹಾಗೂ ಬುಡಕಟ್ಟು ಪ್ರದೇಶಗಳನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**ವಿವರಣೆ:**– ಈ ಉಪಪ್ರಕರಣದಲ್ಲಿ "ಬುಡಕಟ್ಟು ಪ್ರದೇಶಗಳು" ಎಂಬ ಪದಾವಳಿಗೆ ಸಂವಿಧಾನದ ಆರನೇ ಅನುಸೂಚಿಯ ಪ್ಯಾರಾಗ್ರಾಫ್ 20ರ ಅಡಿಯಲ್ಲಿನ ಕೋಷ್ಟಕದ ಭಾಗ–I, II, IIಎ ಮತ್ತು IIIರಲ್ಲಿ ಅನುಕ್ರಮವಾಗಿ ಅಸ್ಸಾಂ ರಾಜ್ಯದೊಳಗೆ, ಮೇಘಾಲಯ ರಾಜ್ಯದೊಳಗೆ, ತ್ರಿಪುರಾ ರಾಜ್ಯದೊಳಗೆ ಮತ್ತು ಮಿಜೋರಾಂ ರಾಜ್ಯದೊಳಗೆ ನಿರ್ದಿಷ್ಟಪಡಿಸಿದ ಪ್ರದೇಶಗಳು.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಬೇರೆಬೇರೆ ರಾಜ್ಯಗಳಿಗಾಗಿ ಬೇರೆಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಗ್ರಾಮ ನ್ಯಾಯಾಲಯ" ಎಂದರೆ, 3ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಸ್ಥಾಪಿತವಾದ ನ್ಯಾಯಾಲಯ ಎಂದು ಅರ್ಥ;

(ಬಿ) "ಗ್ರಾಮ ಪಂಚಾಯತಿ" ಎಂದರೆ, ಗ್ರಾಮೀಣ ಪ್ರದೇಶಗಳಿಗಾಗಿ, ಸಂವಿಧಾನದ 243ಬಿ ಅನುಚ್ಛೇದದ ಮೇರೆಗೆ ಗ್ರಾಮ ಮಟ್ಟದಲ್ಲಿ ರಚಿತವಾದ ಸ್ವಯಮಾಡಳಿತ (ಯಾವುದೇ ಹೆಸರಿನಿಂದ ಕರೆಯಲಾಗುವ) ಸಂಸ್ಥೆ ಎಂದು ಅರ್ಥ;

(ಸಿ) "ಉಚ್ಚ ನ್ಯಾಯಾಲಯ" ಎಂದರೆ,–

(i) ಯಾವುದೇ ರಾಜ್ಯದ ಸಂಬಂಧದಲ್ಲಿ, ಅ ರಾಜ್ಯದ ಉಚ್ಚ ನ್ಯಾಯಾಲಯ;

(ii) ಯಾವ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಾನೂನಿನ ಮೂಲಕ ಯಾವ ರಾಜ್ಯದ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆಯೋ ಆ ಉಚ್ಚ ನ್ಯಾಯಾಲಯ;

(iii) ಯಾವುದೇ ಇತರ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ಭಾರತದ ಸರ್ವೋಚ್ಚ ನ್ಯಾಯಾಲಯವನ್ನು ಹೊರತುಪಡಿಸಿ, ಆ ರಾಜ್ಯಕ್ಷೇತ್ರಕ್ಕಾಗಿ ಇರುವ ಕ್ರಿಮಿನಲ್ ಅಪೀಲಿನ ಅತ್ಯುನ್ನತ ನ್ಯಾಯಾಲಯ;

(ಡಿ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಎಂದು ಅರ್ಥ ಮತ್ತು "ಅಧಿಸೂಚಿತ" ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಇ) "ನ್ಯಾಯಾಧಿಕಾರಿ" ಎಂದರೆ, 5ನೇ ಪ್ರಕರಣದ ಮೇರೆಗೆ ನೇಮಕಗೊಂಡ ಗ್ರಾಮ ನ್ಯಾಯಾಲಯದ ಪೀಠಾಸೀನ ಅಧಿಕಾರಿ ಎಂದು ಅರ್ಥ;

(ಎಫ್) "ಮಧ್ಯಂತರ ಮಟ್ಟದಲ್ಲಿನ ಪಂಚಾಯತಿ" ಎಂದರೆ, ಸಂವಿಧಾನದ ಭಾಗ–IX ರ ಉಪಬಂಧಗಳಿಗನುಸಾರವಾಗಿ ಗ್ರಾಮೀಣ ಪ್ರದೇಶಗಳಿಗಾಗಿ ಸಂವಿಧಾನದ 243ಬಿ ಅನುಚ್ಛೇದದ ಮೇರೆಗೆ ಮಧ್ಯಂತರ ಮಟ್ಟದಲ್ಲಿ ರಚಿತವಾದ ಸ್ವಯಮಾಡಳಿತ (ಯಾವುದೇ ಹೆಸರಿನಿಂದ ಕರೆಯಲಾಗುವ) ಸಂಸ್ಥೆ ಎಂದು ಅರ್ಥ;

(ಜಿ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ;

(ಹೆಚ್) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಿದ ಅನುಸೂಚಿ ಎಂದು ಅರ್ಥ;

(ಐ) ಒಕ್ಕೂಟ ರಾಜ್ಯಕ್ಷೇತ್ರದ ಸಂಬಂಧದಲ್ಲಿ "ರಾಜ್ಯ ಸರ್ಕಾರ" ಎಂದರೆ ಸಂವಿಧಾನದ 239ನೇ ಅನುಚ್ಛೇದದ ಮೇರೆಗೆ ನೇಮಕಗೊಂಡ ಅದರ ಆಡಳಿತಗಾರ ಎಂದು ಅರ್ಥ;

(ಜೆ) ಇದರಲ್ಲಿ ಬಳಸಿದ ಮತ್ತು ಪರಿಭಾಷಿಸಿಲ್ಲದ ಆದರೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರಲ್ಲಿ (1908ರ 5) ಅಥವಾ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಪರಿಭಾಷಿಸಿದ ಪದಗಳು ಮತ್ತು ಪದಾವಳಿಗಳು ಆ ಸಂಹಿತೆಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಇಲ್ಲಿ ಹೊಂದಿರತಕ್ಕದ್ದು.

## ಅಧ್ಯಾಯ- II

## ಗ್ರಾಮ ನ್ಯಾಯಾಲಯ

**3. ಗ್ರಾಮ ನ್ಯಾಯಾಲಯಗಳ ಸ್ಥಾಪನೆ.-** (1) ಈ ಅಧಿನಿಯಮದ ಮೂಲಕ, ಗ್ರಾಮ ನ್ಯಾಯಾಲಯಗಳಿಗೆ ಪ್ರದತ್ತವಾದ ಅಧಿಕಾರ ವ್ಯಾಪ್ತಿಯನ್ನು ಮತ್ತು ಅಧಿಕಾರಗಳನ್ನು ಚಲಾಯಿಸುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಅಧಿಸೂಚನೆ ಮೂಲಕ, ಜಿಲ್ಲೆಯಲ್ಲಿ ಮಧ್ಯಂತರ ಮಟ್ಟದಲ್ಲಿರುವ ಪ್ರತಿಯೊಂದು ಗ್ರಾಮಪಂಚಾಯಿತಿಗಾಗಿ ಅಥವಾ ಜಿಲ್ಲೆಯಲ್ಲಿ ಮಧ್ಯಂತರ ಮಟ್ಟದಲ್ಲಿ ಅಕ್ಕಪಕ್ಕದಲ್ಲಿರುವ ಪಂಚಾಯತಿಗಳ ಸಮೂಹಕ್ಕಾಗಿ ಅಥವಾ ಯಾವುದೇ ರಾಜ್ಯದಲ್ಲಿ ಮಧ್ಯಂತರ ಮಟ್ಟದಲ್ಲಿ ಯಾವುದೇ ಪಂಚಾಯತಿ ಇಲ್ಲದಿರುವಲ್ಲಿ ಅಕ್ಕಪಕ್ಕದಲ್ಲಿರುವ ಗ್ರಾಮಪಂಚಾಯಿತಿಗಳ ಸಮೂಹಕ್ಕಾಗಿ ಒಂದು ಅಥವಾ ಹೆಚ್ಚು ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸತಕ್ಕದ್ದು.

(2) ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಗ್ರಾಮ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಯಾವ ಪ್ರದೇಶದ ಸ್ಥಳೀಯ ಪರಿಮಿತಿಗಳಿಗೆ ವಿಸ್ತರಿಸಬೇಕೋ ಆ ಪ್ರದೇಶದ ಸ್ಥಳೀಯ ಪರಿಮಿತಿಗಳನ್ನು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸತಕ್ಕದ್ದು ಮತ್ತು ಯಾವುದೇ ಕಾಲದಲ್ಲಿ ಅಂಥ ಪರಿಮಿತಿಗಳನ್ನು ಹೆಚ್ಚಿಸಬಹುದು, ಕಡಿಮೆ ಮಾಡಬಹುದು ಅಥವಾ ವ್ಯತ್ಯಾಸಗೊಳಿಸಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ಗ್ರಾಮ ನ್ಯಾಯಾಲಯಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಸ್ಥಾಪಿಸಲಾದ ನ್ಯಾಯಾಲಯಗಳಿಗೆ ಹೆಚ್ಚಿಗೆಯಾಗಿ ಇರತಕ್ಕದ್ದು.

**4. ಗ್ರಾಮ ನ್ಯಾಯಾಲಯದ ಕೇಂದ್ರ ಕಾರ್ಯಸ್ಥಾನ.-** ಪ್ರತಿಯೊಂದು ಗ್ರಾಮ ನ್ಯಾಯಾಲಯದ ಕೇಂದ್ರ ಕಾರ್ಯಸ್ಥಾನವು, ಯಾವ ಮಧ್ಯಂತರ ಪಂಚಾಯಿತಿಯ ಕೇಂದ್ರ ಕಾರ್ಯಸ್ಥಾನದಲ್ಲಿ ಗ್ರಾಮ

ನ್ಯಾಯಾಲಯವನ್ನು ಸ್ಥಾಪಿಸಲಾಗಿದೆಯೋ ಆ ಮಧ್ಯಂತರ ಪಂಚಾಯತಿಯ ಕೇಂದ್ರ ಕಾರ್ಯಸ್ಥಾನದಲ್ಲಿ ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಇತರೆ ಸ್ಥಳದಲ್ಲಿ ಇರತಕ್ಕದ್ದು.

**5. ನ್ಯಾಯಾಧಿಕಾರಿಯ ನೇಮಕ.–** ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ, ಪ್ರತಿಯೊಂದು ಗ್ರಾಮ ನ್ಯಾಯಾಲಯಕ್ಕೆ ಒಬ್ಬ ನ್ಯಾಯಾಧಿಕಾರಿಯನ್ನು ನೇಮಕ ಮಾಡತಕ್ಕದ್ದು.

**6. ನ್ಯಾಯಾಧಿಕಾರಿಯ ನೇಮಕಕ್ಕೆ ಅರ್ಹತೆಗಳು.–** (1) ಯಾರೇ ವ್ಯಕ್ತಿಯು, ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್‌ನಾಗಿ ನೇಮಕಗೊಳ್ಳಲು ಅರ್ಹನಾಗಿದ್ದ ಹೊರತು ನ್ಯಾಯಾಧಿಕಾರಿಯಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

(2) ನ್ಯಾಯಾಧಿಕಾರಿಯನ್ನು ನೇಮಕ ಮಾಡುವಾಗ, ಅನುಸೂಚಿತ ಜಾತಿಯ, ಅನುಸೂಚಿತ ಬುಡಕಟ್ಟಿನ ಸದಸ್ಯರಿಗೆ, ಮಹಿಳೆಯರಿಗೆ ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ವರ್ಗಗಳಿಗೆ ಅಥವಾ ಸಮುದಾಯಗಳಿಗೆ ಪ್ರಾತಿನಿಧ್ಯ ನೀಡತಕ್ಕದ್ದು.

**7. ನ್ಯಾಯಾಧಿಕಾರಿಯ ಸಂಬಳ, ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು.–**ನ್ಯಾಯಾಧಿಕಾರಿಗೆ ಸಂದಾಯವಾಗಬೇಕಾದ ಸಂಬಳ ಮತ್ತು ಇತರ ಭತ್ಯೆಗಳು ಮತ್ತು ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರಿಗೆ ಅನ್ವಯವಾಗಬಹುದಾದಂಥವುಗಳೇ ಆಗಿರತಕ್ಕದ್ದು.

**8. ನ್ಯಾಯಾಧಿಕಾರಿಯು ಯಾವ ವ್ಯವಹರಣೆಗಳಲ್ಲಿ ಅವನು ಹಿತಾಸಕ್ತಿ ಹೊಂದಿರುವನೋ ಆ ವ್ಯವಹರಣೆಯಲ್ಲಿ ಪೀಠಾಸೀನನಾಗಿರತಕ್ಕದ್ದಲ್ಲ.–** ನ್ಯಾಯಾಧಿಕಾರಿಯು ಯಾವ ವ್ಯವಹರಣೆಗಳಲ್ಲಿ ಅವನು ಯಾವುದೇ ಹಿತಾಸಕ್ತಿ ಹೊಂದಿರುವನೋ ಅಥವಾ ಆ ವಿವಾದದ ವಸ್ತು ವಿಷಯದಲ್ಲಿ ಅನ್ಯಥಾ ಒಳಗೊಂಡಿರುವನೋ ಅಥವಾ ಅಂಥ ವ್ಯವಹರಣೆಗಳ ಯಾರೇ ಪಕ್ಷಕಾರನಿಗೆ ಅವನು ಸಂಬಂಧಿಯಾಗಿರುವನೋ ಆ ಗ್ರಾಮ ನ್ಯಾಯಾಲಯದ ವ್ಯವಹರಣೆಗಳಲ್ಲಿ ಪೀಠಾಸೀನನಾಗಿರತಕ್ಕದ್ದಲ್ಲ ಮತ್ತು ಅಂಥ ಪ್ರಕರಣದಲ್ಲಿ ನ್ಯಾಯಾಧಿಕಾರಿಯು, ಅದನ್ನು ಯಾರೇ ಇತರ ನ್ಯಾಯಾಧಿಕಾರಿಗೆ ವರ್ಗಾವಣೆ ಮಾಡುವುದಕ್ಕಾಗಿ ಜಿಲ್ಲಾ ನ್ಯಾಯಾಲಯಕ್ಕೆ ಅಥವಾ ಸಂದರ್ಭಾನುಸಾರ, ಸೆಷನ್ ನ್ಯಾಯಾಲಯಕ್ಕೆ ಆ ವಿಷಯವನ್ನು ಉಲ್ಲೇಖಿಸತಕ್ಕದ್ದು.

**9. ನ್ಯಾಯಾಧಿಕಾರಿಯು ಗ್ರಾಮಗಳಲ್ಲಿ ಸಂಚಾರಿ ನ್ಯಾಯಾಲಯವನ್ನು ನಡೆಸುವುದು ಮತ್ತು ವ್ಯವಹರಣೆಗಳನ್ನು ನಡೆಸುವುದು.–** (1) ನ್ಯಾಯಾಧಿಕಾರಿಯು, ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ನಿಯತಕಾಲಿಕವಾಗಿ ಭೇಟಿ ನೀಡತಕ್ಕದ್ದು ಮತ್ತು ಪಕ್ಷಕಾರರು ಸಾಮಾನ್ಯವಾಗಿ ವಾಸಿಸುವ ಅಥವಾ ಸಂಪೂರ್ಣ ಅಥವಾ ಭಾಗಶಃ ವ್ಯಾಜ್ಯ ಕಾರಣವು ಉದ್ಭವಿಸಿದ ಸ್ಥಳಕ್ಕೆ ತುಂಬಾ

ಹತ್ತಿರದಲ್ಲಿರುವುದೆಂದು ಅವನು ಪರಿಗಣಿಸುವ ಯಾವುದೇ ಸ್ಥಳದಲ್ಲಿ ಅಧಿವಿಚಾರಣೆಯನ್ನು ಅಥವಾ ವ್ಯವಹರಣೆಗಳನ್ನು ನಡೆಸತಕ್ಕದ್ದು:

ಪರಂತು, ಗ್ರಾಮ ನ್ಯಾಯಾಲಯವು ತನ್ನ ಕೇಂದ್ರ ಕಾರ್ಯಸ್ಥಾನದ ಹೊರಗೆ ಸಂಚಾರಿ ನ್ಯಾಯಾಲಯವನ್ನು ನಡೆಸಲು ತೀರ್ಮಾನಿಸಿರುವಲ್ಲಿ, ಅದು ಸಂಚಾರಿ ನ್ಯಾಯಾಲಯವನ್ನು ನಡೆಸಲು ಉದ್ದೇಶಿಸಿರುವ ದಿನಾಂಕ ಮತ್ತು ಸ್ಥಳದ ಬಗ್ಗೆ ವ್ಯಾಪಕ ಪ್ರಚಾರವನ್ನು ನೀಡತಕ್ಕದ್ದು.

(2) ರಾಜ್ಯ ಸರ್ಕಾರವು, ನ್ಯಾಯಾಧಿಕಾರಿಯು ತನ್ನ ಕೇಂದ್ರ ಕಾರ್ಯಸ್ಥಾನದ ಹೊರಗೆ ಅಧಿವಿಚಾರಣೆಯನ್ನು ಅಥವಾ ವ್ಯವಹರಣೆಗಳನ್ನು ನಡೆಸುವಾಗ ಅವನು ಸಂಚಾರಿ ನ್ಯಾಯಾಲಯವನ್ನು ನಡೆಸುವುದಕ್ಕಾಗಿ ಗ್ರಾಮ ನ್ಯಾಯಾಲಯಕ್ಕೆ ವಾಹನಗಳ ಸೌಲಭ್ಯವೂ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ನೀಡತಕ್ಕದ್ದು.

**10. ಗ್ರಾಮ ನ್ಯಾಯಾಲಯದ ಮೊಹರು.–** ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಪ್ರತಿಯೊಂದು ಗ್ರಾಮ ನ್ಯಾಯಾಲಯವು, ಉಚ್ಚ ನ್ಯಾಯಾಲಯವು ರಾಜ್ಯ ಸರ್ಕಾರದ ಅನುಮೋದನೆಯೊಂದಿಗೆ ನಿಯಮಿಸಬಹುದಾದಂಥ ಆಕಾರವನ್ನು ಮತ್ತು ಅಳತೆಯನ್ನು ಹೊಂದಿರುವ ನ್ಯಾಯಾಲಯದ ಮೊಹರನ್ನು ಬಳಸತಕ್ಕದ್ದು.

## ಅಧ್ಯಾಯ – III

## ಗ್ರಾಮ ನ್ಯಾಯಾಲಯದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರ

**11. ಗ್ರಾಮ ನ್ಯಾಯಾಲಯದ ಅಧಿಕಾರ ವ್ಯಾಪ್ತಿ.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಗ್ರಾಮ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ಉಪಬಂಧಿಸಿದ ರೀತಿಯಲ್ಲಿ ಮತ್ತು ಅಷ್ಟರಮಟ್ಟಿಗೆ ಸಿವಿಲ್ ಮತ್ತು ಕ್ರಿಮಿನಲ್ ಎರಡೂ ಅಧಿಕಾರವನ್ನು ಚಲಾಯಿಸತಕ್ಕದ್ದು.

**12. ಕ್ರಿಮಿನಲ್ ಅಧಿಕಾರವ್ಯಾಪ್ತಿ.–** (1) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಗ್ರಾಮ ನ್ಯಾಯಾಲಯವು, ದೂರಿನ ಅಥವಾ ಪೊಲೀಸ್ ವರದಿಯ ಮೇಲೆ ಅಪರಾಧವನ್ನು ಸಂಜ್ಞೇಯಕ್ಕೆ ತೆಗೆದುಕೊಳ್ಳಬಹುದು, ಮತ್ತು,–

(ಎ) ಮೊದಲನೇ ಅನುಸೂಚಿಯ ಭಾಗ-1 ರಲ್ಲಿ ನಿರ್ದಿಷ್ಟಪಡಿಸಿದ ಎಲ್ಲ ಅಪರಾಧಗಳ ಅಧಿವಿಚಾರಣೆ ಮಾಡತಕ್ಕದ್ದು.

(ಬಿ) ಆ ಅನುಸೂಚಿಯ ಭಾಗ- II ರಲ್ಲಿ ಸೇರಿಸಲಾದ ಅಧಿನಿಯಮಗಳ ಮೇರೆಗೆ ನಿರ್ದಿಷ್ಟಪಡಿಸಿದ ಎಲ್ಲಾ ಅಪರಾಧಗಳನ್ನು ಅಧಿವಿಚಾರಣೆ ಮಾಡತಕ್ಕದ್ದು ಮತ್ತು ಪರಿಹಾರವೇನಾದರೂ ಇದ್ದರೆ ಅದನ್ನು ನೀಡತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಗ್ರಾಮ ನ್ಯಾಯಾಲಯವು, 14ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ರಾಜ್ಯ ಅಧಿನಿಯಮಗಳ ಮೇರೆಗಿನ ಅಂಥ ಎಲ್ಲಾ ಅಪರಾಧಗಳನ್ನೂ ಸಹ ಅಧಿವಿಚಾರಣೆ ಮಾಡತಕ್ಕದ್ದು ಅಥವಾ ಅಂಥ ಪರಿಹಾರವನ್ನು ನೀಡತಕ್ಕದ್ದು.

**13. ಸಿವಿಲ್ ಅಧಿಕಾರ ವ್ಯಾಪ್ತಿ.-** (1) ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರಲ್ಲಿ (1908ರ 5) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಮತ್ತು (2)ನೇ ಉಪಪ್ರಕರಣಕ್ಕೆ ಒಳಪಟ್ಟು, ಗ್ರಾಮ ನ್ಯಾಯಾಲಯವು,-

(ಎ) ಎರಡನೇ ಅನುಸೂಚಿಯ ಭಾಗ-I ರಲ್ಲಿ ನಿರ್ದಿಷ್ಟಪಡಿಸಿದ ವಿವಾದಗಳ ವರ್ಗಗಳ ಅಡಿಯಲ್ಲಿ ಬರುವ ಸಿವಿಲ್ ಸ್ವರೂಪದ ಎಲ್ಲಾ ದಾವೆಗಳನ್ನು ಅಥವಾ ವ್ಯವಹರಣೆಗಳನ್ನು ಅಧಿವಿಚಾರಣೆ ಮಾಡಲು;

(ಬಿ) 14ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಮತ್ತು ಸದರಿ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಎಲ್ಲಾ ವರ್ಗಗಳ ಕ್ಲೇಮುಗಳ ಮತ್ತು ವಿವಾದಗಳ ಅಧಿವಿಚಾರಣೆ ಮಾಡಲು

- ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದು.

(2) ಗ್ರಾಮ ನ್ಯಾಯಾಲಯದ ಹಣಕಾಸಿನ ಪರಿಮಿತಿಗಳು, ಉಚ್ಚ ನ್ಯಾಯಾಲಯವು ರಾಜ್ಯ ಸರ್ಕಾರದೊಂದಿಗೆ ಕಾಲಕಾಲಕ್ಕೆ ಸಮಾಲೋಚಿಸಿ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

**14. ಅನುಸೂಚಿಗಳನ್ನು ತಿದ್ದುಪಡಿ ಮಾಡುವ ಅಧಿಕಾರ.-** (1) ಮೊದಲನೇ ಅನುಸೂಚಿಯ ಭಾಗ- Iರಲ್ಲಿನ ಅಥವಾ ಭಾಗ- II ರಲ್ಲಿನ ಅಥವಾ ಸಂದರ್ಭಾನುಸಾರ, ಎರಡನೇ ಅನುಸೂಚಿಯ ಭಾಗ- II ರಲ್ಲಿನ ಯಾವುದೇ ಬಾಬಿಗೆ ಸೇರಿಸುವುದು ಅಥವಾ ಯಾವುದೇ ಬಾಬನ್ನು ಬಿಟ್ಟುಬಿಡುವುದು

ಅವಶ್ಯಕವೆಂದು ಅಥವಾ ವಿಹಿತವೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ, ಅದು ಅಧಿಸೂಚನೆಯ ಮೂಲಕ ಹಾಗೆ ಮಾಡಬಹುದು ಮತ್ತು ತದನುಸಾರವಾಗಿ ತಿದ್ದುಪಡಿ ಮಾಡಿರುವುದಾಗಿ ಭಾವಿಸತಕ್ಕದ್ದು.

(2) (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

(3) ಯಾವ ಬಾಬಿನ ಸಂಬಂಧದಲ್ಲಿ ರಾಜ್ಯ ವಿಧಾನಮಂಡಲವು ಕಾನೂನುಗಳನ್ನು ರಚಿಸಲು ಸಕ್ಷಮವಾಗಿರುವುದೋ ಆ ಯಾವುದೇ ಬಾಬನ್ನು ಮೊದಲನೇ ಅನುಸೂಚಿಯ ಭಾಗ III ರಲ್ಲಿನ ಅಥವಾ ಎರಡನೇ ಅನುಸೂಚಿಯ ಭಾಗ IIರಲ್ಲಿನ ಯಾವುದೇ ಬಾಬಿಗೆ ಸೇರಿಸುವುದು ಅಥವಾ ಯಾವುದೇ ಬಾಬನ್ನು ಬಿಟ್ಟುಬಿಡುವುದು ಅವಶ್ಯಕವೆಂದು ಅಥವಾ ವಿಹಿತವೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಅದು ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ, ಅಧಿಸೂಚನೆಯ ಮೂಲಕ ಹಾಗೆ ಮಾಡಬಹುದು ಮತ್ತು ತದನಂತರ ಮೊದಲನೇ ಅನುಸೂಚಿಯನ್ನು ಅಥವಾ ಸಂದರ್ಭಾನುಸಾರ ಎರಡನೇ ಅನುಸೂಚಿಯನ್ನು ತಿದ್ದುಪಡಿ ಮಾಡಿರುವುದಾಗಿ ಭಾವಿಸತಕ್ಕದ್ದು.

(4) (3)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸತಕ್ಕದ್ದು.

**15. ಕಾಲ ಪರಿಮಿತಿ.–** (1) ಕಾಲ ಪರಿಮಿತಿ ಅಧಿನಿಯಮ, 1963 (1963ರ 36)ರ ಉಪಬಂಧಗಳು ಗ್ರಾಮ ನ್ಯಾಯಾಲಯವು ಅಧಿವಿಚಾರಣೆ ಮಾಡಬಹುದಾದ ದಾವೆಗಳಿಗೆ ಅನ್ವಯವಾಗತಕ್ಕದ್ದು.

(2) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಅಧ್ಯಾಯ XXXVIರ ಉಪಬಂಧಗಳು ಗ್ರಾಮ ನ್ಯಾಯಾಲಯವು ಅಧಿವಿಚಾರಣೆ ಮಾಡಬಹುದಾದ ಅಪರಾಧಗಳ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.

**16. ಇತ್ಯರ್ಥದಲ್ಲಿರುವ ವ್ಯವಹರಣೆಗಳ ವರ್ಗಾವಣೆ.–** (1) ಜಿಲ್ಲಾ ನ್ಯಾಯಾಲಯವು ಅಥವಾ ಸಂದರ್ಭಾನುಸಾರ, ಸೆಷನ್ ನ್ಯಾಯಾಲಯವು, ಉಚ್ಚ ನ್ಯಾಯಾಲಯವು ಅಧಿಸೂಚಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ತನಗೆ ಅಧೀನವಾಗಿರುವ ನ್ಯಾಯಾಲಯಗಳ ಮುಂದೆ ಇತ್ಯರ್ಥದಲ್ಲಿರುವ ಎಲ್ಲಾ ಸಿವಿಲ್ ಅಥವಾ ಕ್ರಿಮಿನಲ್ ಮೊಕದ್ದಮೆಗಳನ್ನು, ಅಂಥ ಮೊಕದ್ದಮೆಗಳ ಅಧಿವಿಚಾರಣೆ ಮಾಡಲು ಅಥವಾ ವಿಲೆ ಮಾಡಲು ಸಕ್ಷಮವಾಗಿರುವ ಗ್ರಾಮ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಬಹುದು.

(2) ಗ್ರಾಮ ನ್ಯಾಯಾಲಯವು ತನ್ನ ವಿವೇಚನಾನುಸಾರ, ಮೊಕದ್ದಮೆಗಳ ಮರು ಅಧಿವಿಚಾರಣೆ ಮಾಡಬಹುದು ಅಥವಾ ತನಗೆ ಅದನ್ನು ವರ್ಗಾವಣೆ ಮಾಡಿದ ಹಂತದಿಂದ ಮುಂದುವರಿಸಬಹುದು.

**17. ಲಿಪಿಕ ಅಧಿಕಾರಿಗಳ ಕರ್ತವ್ಯಗಳು.–** (1) ಗ್ರಾಮ ನ್ಯಾಯಾಲಯವು ತನ್ನ ಪ್ರಕಾರ್ಯಗಳ ನಿರ್ವಹಣೆಗೆ ನೆರವು ನೀಡಲು ಅಗತ್ಯವಾದ ಅಧಿಕಾರಿಗಳ ಮತ್ತು ಇತರ ನೌಕರರ ಬಗೆಗಳನ್ನು ಮತ್ತು ಪ್ರವರ್ಗಗಳನ್ನು ರಾಜ್ಯ ಸರ್ಕಾರವು ನಿರ್ಧರಿಸತಕ್ಕದ್ದು ಮತ್ತು ಅದು ಸೂಕ್ತವೆಂದು ಭಾವಿಸುವಂಥ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ಗ್ರಾಮ ನ್ಯಾಯಾಲಯಕ್ಕೆ ಒದಗಿಸತಕ್ಕದ್ದು.

(2) ಗ್ರಾಮ ನ್ಯಾಯಾಲಯದ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಸಂದಾಯ ಮಾಡಬೇಕಾದ ಸಂಬಳಗಳು ಮತ್ತು ಭತ್ಯೆಗಳು ಮತ್ತು ಅವರ ಇತರ ಸೇವಾ ಷರತ್ತುಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಗ್ರಾಮ ನ್ಯಾಯಾಲಯದ ಅಧಿಕಾರಿಗಳು ಮತ್ತು ಇತರ ನೌಕರರು, ನ್ಯಾಯಾಧಿಕಾರಿಯು ಕಾಲಕಾಲಕ್ಕೆ ಅವರಿಗೆ ವಹಿಸಿಕೊಡಬಹುದಾದಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

## ಅಧ್ಯಾಯ– IV

## ಕ್ರಿಮಿನಲ್ ಮೊಕದ್ದಮೆಗಳಲ್ಲಿ ಪ್ರಕ್ರಿಯೆ

**18. ಕ್ರಿಮಿನಲ್ ಅಧಿವಿಚಾರಣೆಯಲ್ಲಿ ಅಧಿನಿಯಮದ ಅಧ್ಯಾರೋಹಿ ಪರಿಣಾಮ.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಆದರೆ ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಉಪಬಂಧಗಳು ಪರಿಣಾಮವುಳ್ಳದ್ದಾಗಿರತಕ್ಕದ್ದು, ಈ ಸಂಹಿತೆಯ ಉಪಬಂಧಗಳು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರಮಟ್ಟಿಗೆ ಗ್ರಾಮ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳಿಗೆ ಅನ್ವಯವಾಗತಕ್ಕದ್ದು ಮತ್ತು ಸಂಹಿತೆಯ ಸದರಿ ಉಪಬಂಧಗಳ ಉದ್ದೇಶಕ್ಕಾಗಿ ಗ್ರಾಮ ನ್ಯಾಯಾಲಯವನ್ನು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**19. ಗ್ರಾಮ ನ್ಯಾಯಾಲಯವು ಸಂಕ್ಷಿಪ್ತ ಅಧಿವಿಚಾರಣಾ ಪ್ರಕ್ರಿಯೆಯನ್ನು ಅನುಸರಿಸುವುದು.–** (1) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 260ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಅಥವಾ 262ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಗ್ರಾಮ ನ್ಯಾಯಾಲಯವು ಸದರಿ ಸಂಹಿತೆಯ ಅಧ್ಯಾಯ– XXI ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಗನುಸಾರವಾಗಿ ಸಂಕ್ಷಿಪ್ತವಾಗಿ ಅಪರಾಧಗಳ ಅಧಿವಿಚಾರಣೆ ಮಾಡತಕ್ಕದ್ದು ಮತ್ತು ಸದರಿ ಸಂಹಿತೆಯ 262ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳು ಮತ್ತು 263 ರಿಂದ 265ರ ವರೆಗಿನ ಪ್ರಕರಣಗಳು ಸಾಧ್ಯವಾದಷ್ಟುಮಟ್ಟಿಗೆ ಅಂಥ ಅಧಿವಿಚಾರಣೆಗೆ ಅನ್ವಯವಾಗತಕ್ಕದ್ದು.

(2) ಮೊಕದ್ದಮೆಯು, ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡುವುದು ಅನಪೇಕ್ಷಣೀಯವಾದ ಸ್ವರೂಪದ ಮೊಕದ್ದಮೆ ಎಂದು ಸಂಕ್ಷಿಪ್ತ ಅಧಿವಿಚಾರಣೆ ನಡೆಯುತ್ತಿರುವಾಗ ನ್ಯಾಯಾಧಿಕಾರಿಗೆ ಕಂಡುಬಂದರೆ, ವಿಚಾರಣೆ ಮಾಡಬಹುದಾದ ಯಾರೇ ಸಾಕ್ಷಿದಾರನನ್ನು ನ್ಯಾಯಾಧಿಕಾರಿಯು ಪುನಃ ಕರೆಯತಕ್ಕದ್ದು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಮೇರೆಗೆ ಉಪಬಂಧಿಸಿದ ರೀತಿಯಲ್ಲಿ ಮೊಕದ್ದಮೆಯನ್ನು ಪುನಃ ವಿಚಾರಣೆ ಮಾಡಲು ಮುಂದುವರಿಯತಕ್ಕದ್ದು.

**20. ಗ್ರಾಮ ನ್ಯಾಯಾಲಯದ ಮುಂದೆ ಕಡಿಮೆ ದಂಡನೆಗೆ ಕೋರಿಕೆ.–** ಅಪರಾಧದ ಆಪಾದಿತ ವ್ಯಕ್ತಿಯು, ಯಾವ ಗ್ರಾಮ ನ್ಯಾಯಾಲಯದಲ್ಲಿ ಅಂಥ ಅಪರಾಧವು ಅಧಿವಿಚಾರಣೆಗೆ ಇತ್ಯರ್ಥದಲ್ಲಿದೆಯೋ ಆ ಗ್ರಾಮ ನ್ಯಾಯಾಲಯದಲ್ಲಿ ಕಡಿಮೆ ದಂಡನೆಗೆ ಕೋರಿ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಗ್ರಾಮ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ XXIಎ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಪ್ರಕರಣವನ್ನು ವಿಲೆ ಮಾಡತಕ್ಕದ್ದು.

**21. ಗ್ರಾಮ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ನಡೆಸುವುದು ಮತ್ತು ಪಕ್ಷಕಾರರಿಗೆ ಕಾನೂನು ನೆರವು.–** (1) ಸರ್ಕಾರದ ಪರವಾಗಿ ಗ್ರಾಮ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ನಡೆಸುವ ಉದ್ದೇಶಕ್ಕಾಗಿ, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 25ನೇ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಗ್ರಾಮ ನ್ಯಾಯಾಲಯದ ಮುಂದಿರುವ ಕ್ರಿಮಿನಲ್ ವ್ಯವಹರಣೆಯಲ್ಲಿ, ಫಿರ್ಯಾದುದಾರನು, ಗ್ರಾಮ ನ್ಯಾಯಾಲಯದ ಅನುಮತಿ ಪಡೆದು ಪ್ರಾಸಿಕ್ಯೂಷನ್ನಿನ ವಾದವನ್ನು ಮಂಡಿಸಲು ತನ್ನ ಖರ್ಚಿನಲ್ಲಿ ತಾನು ಇಚ್ಛಿಸುವ ನ್ಯಾಯವಾದಿಯನ್ನು ನೇಮಕ ಮಾಡಿಕೊಳ್ಳಬಹುದು.

(3) ಕಾನೂನು ಸೇವಾ ಪ್ರಾಧಿಕಾರ ಅಧಿನಿಯಮ, 1987 (1987ರ 39)ರ 6ನೇ ಪ್ರಕರಣದ ಮೇರೆಗೆ ರಚಿತವಾದ ರಾಜ್ಯ ಕಾನೂನು ಸೇವಾ ಪ್ರಾಧಿಕಾರವು, ನ್ಯಾಯವಾದಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಪ್ರತಿಯೊಂದು ಗ್ರಾಮ ನ್ಯಾಯಾಲಯಕ್ಕೆ ಆ ಪೈಕಿ ಕನಿಷ್ಠ ಪಕ್ಷ ಇಬ್ಬರನ್ನು ಗೊತ್ತುಪಡಿಸತಕ್ಕದ್ದು, ಹೀಗೆ ಮಾಡುವುದರಿಂದ ನ್ಯಾಯವಾದಿಯನ್ನು ನೇಮಿಸಿಕೊಳ್ಳಲು ಅಸಮರ್ಥನಾಗಿರುವ ಆಪಾದಿತನಿಗೆ, ಗ್ರಾಮ ನ್ಯಾಯಾಲಯವು ಅವರ ಸೇವೆಗಳನ್ನು ಒದಗಿಸಬಹುದು.

**22. ತೀರ್ಪನ್ನು ಉಚ್ಚರಿಸುವುದು.–** (1) ಪ್ರತಿಯೊಂದು ಅಧಿವಿಚಾರಣೆಯಲ್ಲಿಯ ತೀರ್ಪನ್ನು ನ್ಯಾಯಾಧಿಕಾರಿಯು ಅಧಿವಿಚಾರಣೆ ಮುಗಿದ ತರುವಾಯ ಕೂಡಲೇ ಅಥವಾ ಹದಿನೈದು ದಿನಗಳನ್ನು ಮೀರದ ಯಾವುದೇ ತರುವಾಯದ ಕಾಲದಲ್ಲಿ, ಪಕ್ಷಕಾರರಿಗೆ ಆ ಬಗ್ಗೆ ನೋಟೀಸು ನೀಡಿದ ತರುವಾಯ ಬಹಿರಂಗ ನ್ಯಾಯಾಲಯದಲ್ಲಿ ಉಚ್ಚರಿಸತಕ್ಕದ್ದು.

(2) ಗ್ರಾಮ ನ್ಯಾಯಾಲಯವು ಕೂಡಲೇ ಉಭಯ ಪಕ್ಷಕಾರರಿಗೆ ಉಚಿತವಾಗಿ ತನ್ನ ತೀರ್ಪಿನ ಪ್ರತಿಯನ್ನು ನೀಡತಕ್ಕದ್ದು.

## ಅಧ್ಯಾಯ- V

## ಸಿವಿಲ್ ಮೊಕದ್ದಮೆಗಳಲ್ಲಿ ಪ್ರಕ್ರಿಯೆ

**23. ಸಿವಿಲ್ ವ್ಯವಹರಣೆಗಳಲ್ಲಿ ಅಧಿನಿಯಮದ ಅಧ್ಯಾರೋಹಿ ಪರಿಣಾಮ.–** ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಆದರೆ ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಉಪಬಂಧಗಳು ಪರಿಣಾಮವುಳ್ಳದ್ದಾಗಿರತಕ್ಕದ್ದು. ಸದರಿ ಸಂಹಿತೆಯ ಉಪಬಂಧಗಳು, ಈ ಅಧಿನಿಯಮದ ಉಪಬಂಧಗಳಿಗೆ ಅವು ಅಸಂಗತವಾಗದಿರುವಷ್ಟರ ಮಟ್ಟಿಗೆ ಗ್ರಾಮ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳಿಗೆ ಅನ್ವಯವಾಗತಕ್ಕದ್ದು ಮತ್ತು ಸಂಹಿತೆಯ ಸದರಿ ಉಪಬಂಧಗಳ ಉದ್ದೇಶಗಳಿಗಾಗಿ, ಗ್ರಾಮ ನ್ಯಾಯಾಲಯವನ್ನು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**24. ಸಿವಿಲ್ ವಿವಾದಗಳಲ್ಲಿ ವಿಶೇಷ ಪ್ರಕ್ರಿಯೆ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ದಾವೆಯನ್ನು, ಕ್ಲೇಮನ್ನು ಅಥವಾ ವಿವಾದವನ್ನು, ಉಚ್ಚ ನ್ಯಾಯಾಲಯವು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಕಾಲಕಾಲಕ್ಕೆ ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ರೀತಿಯಲ್ಲಿ ಮತ್ತು ಒಂದು ನೂರು ರೂಪಾಯಿಗಳಿಗೆ ಮೀರದ ಅಂಥ ಫೀಜಿನ ಜೊತೆಗೆ ಗ್ರಾಮ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ಮೂಲಕ ಹೂಡತಕ್ಕದ್ದು.

(2) ದಾವೆಯನ್ನು, ಕ್ಲೇಮನ್ನು ಅಥವಾ ವಿವಾದವನ್ನು ಕ್ರಮಬದ್ಧವಾಗಿ ಹೂಡಿರುವಲ್ಲಿ, ಗ್ರಾಮ ನ್ಯಾಯಾಲಯವು, ಸಮನಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಹಾಜರಾಗುವಂತೆ ಮತ್ತು ಕ್ಲೇಮಿಗೆ ಉತ್ತರಿಸುವಂತೆ ಸೂಚಿಸಿ ಎದುರು ಪಕ್ಷಕಾರನಿಗೆ (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯ ಪ್ರತಿಯ ಜೊತೆಗೆ ಸಮನುಗಳನ್ನು ನೀಡತಕ್ಕದ್ದು ಮತ್ತು ಅದನ್ನು ಉಚ್ಚ ನ್ಯಾಯಾಲಯವು ನಿಯಮಿಸಬಹುದಾದಂಥ ರೀತಿಯಲ್ಲಿ ಜಾರಿ ಮಾಡತಕ್ಕದ್ದು.

(3) ಎದುರು ಪಕ್ಷಕಾರನು ತನ್ನ ಲಿಖಿತ ಹೇಳಿಕೆಯನ್ನು ದಾಖಲಿಸಿದ ತರುವಾಯ, ಗ್ರಾಮ ನ್ಯಾಯಾಲಯವು ವಿಚಾರಣೆಗಾಗಿ ದಿನಾಂಕವನ್ನು ನಿಗದಿಪಡಿಸತಕ್ಕದ್ದು ಮತ್ತು ಎಲ್ಲ ಪಕ್ಷಕಾರರು ಖುದ್ದಾಗಿ ಅಥವಾ ಅವರ ನ್ಯಾಯವಾದಿಗಳ ಮೂಲಕ ಹಾಜರಾಗುವಂತೆ ತಿಳಿಸತಕ್ಕದ್ದು.

(4) ವಿಚಾರಣೆಗಾಗಿ ನಿಗದಿಪಡಿಸಿದ ದಿನಾಂಕದಂದು, ಗ್ರಾಮ ನ್ಯಾಯಾಲಯವು, ಉಭಯ ಪಕ್ಷಕಾರರನ್ನು, ಅವರವರ ವಾದಗಳನ್ನು ಮಂಡಿಸುವುದಕ್ಕೆ ಸಂಬಂಧಿಸಿದಂತೆ ವಿಚಾರಣೆ ಮಾಡತಕ್ಕದ್ದು

ಮತ್ತು ವಿವಾದದ ಬಗ್ಗೆ ಯಾವುದೇ ಸಾಕ್ಷ್ಯ ದಾಖಲಿಸುವುದು ಅಗತ್ಯವಿಲ್ಲದಿರುವಲ್ಲಿ, ತೀರ್ಪನ್ನು ಉಚ್ಚರಿಸತಕ್ಕದ್ದು; ಮತ್ತು ಸಾಕ್ಷ್ಯವನ್ನು ದಾಖಲಿಸುವುದು ಅಗತ್ಯವಿದ್ದ ಸಂದರ್ಭದಲ್ಲಿ, ಗ್ರಾಮ ನ್ಯಾಯಾಲಯವು ವ್ಯವಹರಣೆಯನ್ನು ಮುಂದುವರಿಸತಕ್ಕದ್ದು.

(5) ಗ್ರಾಮ ನ್ಯಾಯಾಲಯವು,–

(ಎ) ಹಾಜರಾಗಲು ತಪ್ಪಿದ್ದಕ್ಕಾಗಿ ಯಾವುದೇ ಮೊಕದ್ದಮೆಯನ್ನು ವಜಾ ಮಾಡುವ ಅಥವಾ ಏಕಪಕ್ಷೀಯವಾಗಿ ಮುಂದುವರಿಸುವ; ಮತ್ತು

(ಬಿ) ಹಾಜರಾಗಲು ತಪ್ಪಿದ್ದಕ್ಕಾಗಿ ವಜಾಮಾಡಿದ ಅಂಥ ಯಾವುದೇ ಆದೇಶವನ್ನು ಅಥವಾ ಮೊಕದ್ದಮೆಯನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡುವುದಕ್ಕೆ ಅದು ಹೊರಡಿಸಿದ ಯಾವುದೇ ಆದೇಶವನ್ನು ರದ್ದುಪಡಿಸುವ

– ಅಧಿಕಾರವನ್ನು ಹೊಂದಿರತಕ್ಕದ್ದು.

(6) ವ್ಯವಹರಣೆಗಳು ನಡೆಯುತ್ತಿರುವಾಗ ಉದ್ಭವಿಸಬಹುದಾದಂಥ ಯಾವುದೇ ಪ್ರಾಸಂಗಿಕ ವಿಷಯದ ಬಗ್ಗೆ ಗ್ರಾಮ ನ್ಯಾಯಾಲಯವು, ಅದು ನ್ಯಾಯದ ಹಿತದೃಷ್ಟಿಯಿಂದ ನ್ಯಾಯಸಮ್ಮತ ಮತ್ತು ಸೂಕ್ತವೆಂದು ಭಾವಿಸಬಹುದಾದಂಥ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳತಕ್ಕದ್ದು.

(7) ವ್ಯವಹರಣೆಗಳು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ನ್ಯಾಯೋದ್ದೇಶಗಳಿಗೆ ಸುಸಂಗತವಾಗಿರತಕ್ಕದ್ದು ಮತ್ತು ಗ್ರಾಮ ನ್ಯಾಯಾಲಯವು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಮರುದಿನದ ನಂತರದ ಯಾವುದೇ ದಿನಕ್ಕೆ ವಿಚಾರಣೆಯನ್ನು ಮುಂದೂಡುವುದು ಅವಶ್ಯವೆಂದು ಅದಕ್ಕೆ ಕಂಡುಬಂದ ಹೊರತು, ಅದು ನಿರ್ಣಯಕ್ಕೆ ಬರುವವವರೆಗೆ ಪ್ರತಿ ದಿನವೂ ವಿಚಾರಣೆಯನ್ನು ನಡೆಸತಕ್ಕದ್ದು.

(8) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯನ್ನು ಅದನ್ನು ಸಲ್ಲಿಸಿದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಗ್ರಾಮ ನ್ಯಾಯಾಲಯವು ವಿಲೆ ಮಾಡತಕ್ಕದ್ದು.

(9) ಪ್ರತಿಯೊಂದು ದಾವೆಯ, ಕ್ಲೇಮಿನ ಅಥವಾ ವಿವಾದದ ತೀರ್ಪನ್ನು ಗ್ರಾಮ ನ್ಯಾಯಾಲಯವು ವಿಚಾರಣೆಯನ್ನು ಮುಕ್ತಾಯಗೊಳಿಸಿದ ನಿಕಟ ತರುವಾಯ ಅಥವಾ ಹದಿನೈದು

ದಿನಗಳಿಗೆ ಮೀರದ ಯಾವುದೇ ತರುವಾಯದ ಕಾಲದಲ್ಲಿ ಪಕ್ಷಕಾರರಿಗೆ ಆ ಬಗ್ಗೆ ನೋಟೀಸು ನೀಡಿದ ಬಳಿಕ, ಬಹಿರಂಗ ನ್ಯಾಯಾಲಯದಲ್ಲಿ ಉಚ್ಚರಿಸತಕ್ಕದ್ದು.

(10) ಮೊಕದ್ದಮೆಯ ಸಂಕ್ಷಿಪ್ತ ವಿವರಣೆ, ನಿರ್ಧರಣಾಂಶ, ಅದರ ಮೇಲಿನ ತೀರ್ಮಾನ ಮತ್ತು ಅಂಥ ತೀರ್ಮಾನದ ಕಾರಣಗಳನ್ನು ತೀರ್ಪು ಒಳಗೊಂಡಿರತಕ್ಕದ್ದು.

(11) ತೀರ್ಪನ್ನು ಉಚ್ಚರಿಸಿದ ದಿನಾಂಕದಿಂದ ಮೂರು ದಿವಸಗಳೊಳಗೆ ಉಭಯ ಪಕ್ಷಕಾರರಿಗೆ ತೀರ್ಪಿನ ಪ್ರತಿಯನ್ನು ಉಚಿತವಾಗಿ ನೀಡತಕ್ಕದ್ದು.

**25. ಗ್ರಾಮ ನ್ಯಾಯಾಲಯದ ಡಿಕ್ರಿಗಳ ಮತ್ತು ಆದೇಶಗಳ ಜಾರಿ.–** (1) ಸಿವಿಲ್ ಪ್ರಕ್ರಿಯಾ ಸಂಹಿತೆ 1908 (1908ರ 5) ರಲ್ಲಿ ಏನೇ ಒಳಗೊಂಡಿದ್ದರೂ, ಗ್ರಾಮ ನ್ಯಾಯಾಲಯವು ನೀಡಿದ ತೀರ್ಪನ್ನು ಡಿಕ್ರಿ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಗ್ರಾಮ ನ್ಯಾಯಾಲಯವು ಅದನ್ನು ಸಿವಿಲ್ ನ್ಯಾಯಾಲಯದ ಡಿಕ್ರಿಯಂತೆ ಜಾರಿಗೊಳಿಸತಕ್ಕದ್ದು ಮತ್ತು ಈ ಉದ್ದೇಶಗಳಿಗಾಗಿ ಗ್ರಾಮ ನ್ಯಾಯಾಲಯವು ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಗ್ರಾಮ ನ್ಯಾಯಾಲಯವು, ಡಿಕ್ರಿ ಜಾರಿಯ ಸಂಬಂಧದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರಲ್ಲಿ ಉಪಬಂಧಿಸಲಾದ ಪ್ರಕ್ರಿಯೆಗೆ ಬದ್ಧವಾಗಿರತಕ್ಕದ್ದಲ್ಲ ಮತ್ತು ಅದು ಸ್ವಾಭಾವಿಕ ನ್ಯಾಯ ತತ್ವಗಳಿಂದ ಮಾರ್ಗದರ್ಶನ ಪಡೆದಿರತಕ್ಕದ್ದು.

(3) ಡಿಕ್ರಿಯನ್ನು ಹೊರಡಿಸಿದ ಗ್ರಾಮ ನ್ಯಾಯಾಲಯವಾಗಲಿ ಅಥವಾ ಅದನ್ನು ಜಾರಿಗಾಗಿ ಯಾವ ಗ್ರಾಮ ನ್ಯಾಯಾಲಯಕ್ಕೆ ಕಳುಹಿಸಲಾಗಿದೆಯೋ ಆ ಇತರ ಗ್ರಾಮ ನ್ಯಾಯಾಲಯವಾಗಲೀ ಜಾರಿ ಮಾಡತಕ್ಕದ್ದು.

**26. ಸಿವಿಲ್ ವಿವಾದಗಳ ಸಂಧಾನಕ್ಕಾಗಿ ಮತ್ತು ಇತ್ಯರ್ಥಕ್ಕಾಗಿ ಪ್ರಯತ್ನಿಸುವುದು ಗ್ರಾಮ ನ್ಯಾಯಾಲಯದ ಕರ್ತವ್ಯ.–** (1) ಗ್ರಾಮ ನ್ಯಾಯಾಲಯವು ಪ್ರತಿಯೊಂದು ದಾವೆಯಲ್ಲಿ ಅಥವಾ ವ್ಯವಹರಣೆಯಲ್ಲಿ ಮೊದಲನೆಯದಾಗಿ ಮೊಕದ್ದಮೆಯ ಸ್ವರೂಪ ಮತ್ತು ಸನ್ನಿವೇಶಗಳಿಗೆ ಸುಸಂಗತವಾಗಿರುವಂತೆ ದಾವೆಯ, ಕ್ಲೇಮಿನ ಅಥವಾ ವಿವಾದದ ವಸ್ತು ವಿಷಯದ ಸಂಬಂಧದಲ್ಲಿ ಪಕ್ಷಕಾರರು ಇತ್ಯರ್ಥಕ್ಕೆ ಬರುವಲ್ಲಿ ನೆರವು ನೀಡಲು, ಅವರ ಮನವೊಲಿಸಲು ಮತ್ತು ಸಂಧಾನ ಮಾಡಿಕೊಳ್ಳಲು ಸಾಧ್ಯವಿರುವಲ್ಲೆಲ್ಲಾ ಹಾಗೆ ಮಾಡಲು ಪ್ರಯತ್ನಿಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಗ್ರಾಮ ನ್ಯಾಯಾಲಯವು, ಉಚ್ಚ ನ್ಯಾಯಾಲಯವು ನಿಯಮಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

(2) ಯಾವುದೇ ದಾವೆಯ ಅಥವಾ ವ್ಯವಹರಣೆಯ ಯಾವುದೇ ಹಂತದಲ್ಲಿ, ಪಕ್ಷಕಾರರ ನಡುವೆ ಇತ್ಯರ್ಥದ ಯುಕ್ತ ಸಾಧ್ಯತೆ ಇದೆ ಎಂದು ಗ್ರಾಮ ನ್ಯಾಯಾಲಯಕ್ಕೆ ಕಂಡುಬಂದಲ್ಲಿ, ಗ್ರಾಮ ನ್ಯಾಯಾಲಯವು ಅಂಥ ಇತ್ಯರ್ಥಕ್ಕೆ ಬರಲು ಅವರು ಪ್ರಯತ್ನಿಸಲು ಸಾಧ್ಯವಾಗುವಂತೆ ಅದು ಸೂಕ್ತವೆಂದು ಭಾವಿಸುವಂಥ ಅವಧಿಯವರೆಗೆ ವ್ಯವಹರಣೆಯನ್ನು ಮುಂದೂಡಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಯಾವುದೇ ವ್ಯವಹರಣೆಯನ್ನು ಮುಂದೂಡಿರುವಲ್ಲಿ, ಗ್ರಾಮ ನ್ಯಾಯಾಲಯವು ತನ್ನ ವಿವೇಚನಾನುಸಾರ, ಪಕ್ಷಕಾರರ ನಡುವೆ ಇತ್ಯರ್ಥ ಮಾಡುವುದಕ್ಕಾಗಿ ಒಬ್ಬ ಅಥವಾ ಹೆಚ್ಚಿನ ಸಂಧಾನಕಾರರಿಗೆ ವಿಷಯವನ್ನು ಉಲ್ಲೇಖಿಸಬಹುದು.

(4) (2)ನೇ ಉಪಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರವು ವ್ಯವಹರಣೆಯನ್ನು ಮುಂದೂಡುವ ಗ್ರಾಮ ನ್ಯಾಯಾಲಯದ ಯಾವುದೇ ಇತರ ಅಧಿಕಾರಕ್ಕೆ ಹೆಚ್ಚಿಗೆಯಾಗಿರತಕ್ಕದ್ದು ಮತ್ತು ಅದನ್ನು ಕುಂಠಿತಗೊಳಿಸುವಂತಿರತಕ್ಕದ್ದಲ್ಲ.

**27. ಸಂಧಾನಕಾರರ ನೇಮಕ.–** (1) 26ನೇ ಪ್ರಕರಣದ ಉದ್ದೇಶಗಳಿಗಾಗಿ ಜಿಲ್ಲಾ ನ್ಯಾಯಾಲಯವು ಜಿಲ್ಲಾ ಮ್ಯಾಜಿಸ್ಟ್ರೇಟರೊಂದಿಗೆ ಸಮಾಲೋಚಿಸಿ ಸಂಧಾನಕಾರರಾಗಿ ನೇಮಕ ಮಾಡುವುದಕ್ಕಾಗಿ ಉಚ್ಚ ನ್ಯಾಯಾಲಯವು ನಿಯಮಿಸಬಹುದಾದಂಥ ಅರ್ಹತೆಗಳನ್ನು ಮತ್ತು ಅನುಭವವನ್ನು ಹೊಂದಿರುವ, ಗ್ರಾಮಮಟ್ಟದಲ್ಲಿ ನೀತಿ–ನಿಷ್ಠೆಯನ್ನು ಹೊಂದಿರುವ ಸಾಮಾಜಿಕ ಕಾರ್ಯಕರ್ತರ ಹೆಸರನ್ನು ಒಳಗೊಂಡಿರುವ ಒಂದು ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(2) ಸಂಧಾನಕಾರರಿಗೆ ಸಂದಾಯ ಮಾಡಬೇಕಾದ ಉಪವೇಶನ ಶುಲ್ಕ ಮತ್ತು ಇತರೆ ಭತ್ಯೆ ಮತ್ತು ಅವರ ನಿಯೋಜನೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

**28. ಸಿವಿಲ್ ವಿವಾದಗಳ ವರ್ಗಾವಣೆ.–** ಅಧಿಕಾರವ್ಯಾಪ್ತಿ ಹೊಂದಿರುವ ಜಿಲ್ಲಾ ನ್ಯಾಯಾಲಯವು, ಯಾರೇ ಪಕ್ಷಕಾರರು ಸಲ್ಲಿಸಿದ ಅರ್ಜಿಯ ಮೇಲೆ ಅಥವಾ ಒಂದು ಗ್ರಾಮ ನ್ಯಾಯಾಲಯದ ಮುಂದೆ ಬಹಳಷ್ಟು ಮೊಕದ್ದಮೆಗಳು ಇತ್ಯರ್ಥದಲ್ಲಿರುವಲ್ಲಿ ಅಥವಾ ನ್ಯಾಯದ ದೃಷ್ಟಿಯಿಂದ ಅದು ಅವಶ್ಯಕವೆಂದು ಪರಿಗಣಿಸಿದಾಗಲೆಲ್ಲ ಒಂದು ಗ್ರಾಮ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಮೊಕದ್ದಮೆಯನ್ನು ತನ್ನ ಅಧಿಕಾರ ವ್ಯಾಪ್ತಿಯೊಳಗಿನ ಯಾವುದೇ ಇತರ ಗ್ರಾಮ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಬಹುದು.

## ಅಧ್ಯಾಯ – VI
## ಸಾಮಾನ್ಯ ಪ್ರಕ್ರಿಯೆ

**29. ವ್ಯವಹರಣೆಗಳು ರಾಜ್ಯದ ಅಧಿಕೃತ ಭಾಷೆಯಲ್ಲಿರುವುದು.–** ಗ್ರಾಮ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳು ಮತ್ತು ಅದರ ತೀರ್ಪು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಇಂಗ್ಲಿಷ್ ಭಾಷೆಯನ್ನು ಹೊರತುಪಡಿಸಿ ರಾಜ್ಯದ ಅಧಿಕೃತ ಭಾಷೆಗಳ ಪೈಕಿ ಒಂದು ಭಾಷೆಯಲ್ಲಿರತಕ್ಕದ್ದು.

**30. ಭಾರತ ಸಾಕ್ಷ್ಯ ಅಧಿನಿಯಮ, 1872ರ ಅನ್ವಯ.–** ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ ಮೇರೆಗೆ ಅನ್ಯಥಾ ಸುಸಂಬದ್ಧವಾಗಿರಲಿ ಅಥವಾ ಅಂಗೀಕಾರಾರ್ಹವಾಗಿರಲಿ ಅಥವಾ ಇಲ್ಲದಿರಲಿ ವಿವಾದದ ಸಂಬಂಧದಲ್ಲಿ ಪರಿಣಾಮಕಾರಿಯಾಗಿ ವ್ಯವಹರಿಸುವುದಕ್ಕೆ ಸಹಾಯಕಾರಿಯಾಗುವುದೆಂದು ಗ್ರಾಮ ನ್ಯಾಯಾಲಯವು ಅಭಿಪ್ರಾಯಪಡುವ ಯಾವುದೇ ವರದಿಯನ್ನು, ಹೇಳಿಕೆಯನ್ನು, ದಸ್ತಾವೇಜನ್ನು, ಮಾಹಿತಿಯನ್ನು ಅಥವಾ ವಿಷಯವನ್ನು ಅದು ಸಾಕ್ಷ್ಯವಾಗಿ ಸ್ವೀಕರಿಸಬಹುದು.

**31. ಮೌಖಿಕ ಸಾಕ್ಷ್ಯವನ್ನು ದಾಖಲಿಸುವುದು.–** ಗ್ರಾಮ ನ್ಯಾಯಾಲಯದ ಮುಂದಿರುವ ದಾವೆಗಳಲ್ಲಿ ಅಥವಾ ವ್ಯವಹರಣೆಗಳಲ್ಲಿ ಸಾಕ್ಷಿದಾರನ ಸುದೀರ್ಘ ಸಾಕ್ಷ್ಯವನ್ನು ದಾಖಲಿಸುವುದು ಅವಶ್ಯವಾಗಿರತಕ್ಕದ್ದಲ್ಲ. ಆದರೆ ಪ್ರತಿಯೊಬ್ಬ ಸಾಕ್ಷಿದಾರನನ್ನು ಪರೀಕ್ಷಿಸುವುದು ಮುಂದುವರಿದಂತೆ ನ್ಯಾಯಾಧಿಕಾರಿಯು ಸಾಕ್ಷಿದಾರನು ಹೇಳಿದ ಸಾಕ್ಷ್ಯದ ಸಾರಾಂಶದ ವಿವರಣ ಪತ್ರವನ್ನು ದಾಖಲಿಸತಕ್ಕದ್ದು ಅಥವಾ ದಾಖಲಿಸುವಂತೆ ಮಾಡತಕ್ಕದ್ದು ಮತ್ತು ಅಂಥ ವಿವರಣ ಪತ್ರಕ್ಕೆ ಸಾಕ್ಷಿದಾರನು ಮತ್ತು ನ್ಯಾಯಾಧಿಕಾರಿಯು ಸಹಿ ಮಾಡತಕ್ಕದ್ದು ಮತ್ತು ಅದು ದಾಖಲೆಯ ಭಾಗವಾಗತಕ್ಕದ್ದು.

**32. ಔಪಚಾರಿಕ ಸ್ವರೂಪದ ಸಾಕ್ಷ್ಯವನ್ನು ಅಫಿಡಾವಿಟ್ ಮೇಲೆ ತೆಗೆದುಕೊಳ್ಳುವುದು.–** (1) ಯಾರೇ ವ್ಯಕ್ತಿಯ ಸಾಕ್ಷ್ಯವನ್ನು, ಅಂಥ ಸಾಕ್ಷ್ಯವು ಔಪಚಾರಿಕ ಸ್ವರೂಪದ್ದಾಗಿದಲ್ಲಿ, ಅದನ್ನು ಅಫಿಡಾವಿಟ್ಟಿನ ಮೂಲಕ ನೀಡಬಹುದು ಮತ್ತು ಎಲ್ಲಾ ನ್ಯಾಯಸಮ್ಮತ ವಿನಾಯಿತಿಗಳಿಗೆ ಒಳಪಟ್ಟು ಗ್ರಾಮ ನ್ಯಾಯಾಲಯದ ಮುಂದಿರುವ ಯಾವುದೇ ದಾವೆಯಲ್ಲಿ ಅಥವಾ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಓದಬಹುದು.

(2) ಗ್ರಾಮ ನ್ಯಾಯಾಲಯವು, ಅದು ಸೂಕ್ತವೆಂದು ಭಾವಿಸಿದರೆ, ದಾವೆಯ ಅಥವಾ ವ್ಯವಹರಣೆಯ ಯಾರೇ ಪಕ್ಷಕಾರನ ಅರ್ಜಿಯ ಮೇಲೆ ಯಾರೇ ವ್ಯಕ್ತಿಗೆ ಸಮನು ನೀಡಬಹುದು ಮತ್ತು ಆತನ ಅಫಿಡಾವಿಟ್ಟಿನಲ್ಲಿರುವ ಸಂಗತಿಗಳ ಬಗ್ಗೆ ಅಂಥ ಯಾರೇ ವ್ಯಕ್ತಿಯನ್ನು ವಿಚಾರಣೆ ಮಾಡಬಹುದು.

## ಅಧ್ಯಾಯ– VII
## ಅಪೀಲುಗಳು

**33. ಕ್ರಿಮಿನಲ್ ಮೊಕದ್ದಮೆಗಳಲ್ಲಿ ಅಪೀಲು.–** (1) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಇದರಲ್ಲಿ ಕೆಳಗೆ ಉಪಬಂಧಿಸಿರುವುದನ್ನು ಹೊರತುಪಡಿಸಿ, ಗ್ರಾಮ ನ್ಯಾಯಾಲಯದ ಯಾವುದೇ ತೀರ್ಪಿನ, ಶಿಕ್ಷೆಯ ಅಥವಾ ಆದೇಶದ ವಿರುದ್ಧ ಯಾವುದೇ ಅಪೀಲಿಗೆ ಅವಕಾಶವಿರತಕ್ಕದ್ದಲ್ಲ.

(2) (ಎ) ಆಪಾದಿತ ವ್ಯಕ್ತಿಯು ತಪ್ಪನ್ನು ಒಪ್ಪಿಕೊಂಡಲ್ಲಿ ಮತ್ತು ಅಂಥ ತಪ್ಪನ್ನು ಒಪ್ಪಿಕೊಂಡ ಮೇಲೆ ನಿರ್ಣೀತ ಅಪರಾಧಿ ಎಂದು ನಿರ್ಣೀತನಾಗಿದ್ದರೆ;

(ಬಿ) ಗ್ರಾಮ ನ್ಯಾಯಾಲಯವು ಒಂದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯ ಶಿಕ್ಷೆಯನ್ನು ಮಾತ್ರ ನೀಡಿದ್ದರೆ

– ಯಾವುದೇ ಅಪೀಲಿಗೆ ಅವಕಾಶವಿರತಕ್ಕದ್ದಲ್ಲ.

(3) (2)ನೇ ಉಪಪ್ರಕರಣಕ್ಕೆ ಒಳಪಟ್ಟು, ಗ್ರಾಮ ನ್ಯಾಯಾಲಯದ ಯಾವುದೇ ಇತರ ತೀರ್ಪಿನ, ಶಿಕ್ಷೆಯ ಅಥವಾ ಆದೇಶದ ವಿರುದ್ಧ ಸೆಷನ್ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು.

(4) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು ಗ್ರಾಮ ನ್ಯಾಯಾಲಯದ ತೀರ್ಪಿನ, ಶಿಕ್ಷೆಯ ಅಥವಾ ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಸಲ್ಲಿಸತಕ್ಕದ್ದು:

ಪರಂತು, ಸದರಿ ಅವಧಿಯೊಳಗೆ ಅಪೀಲು ಸಲ್ಲಿಸದಿರುವುದಕ್ಕೆ ಅಪೀಲುದಾರನಿಗೆ ಸಾಕಷ್ಟು ಕಾರಣಗಳಿದ್ದವೆಂದು ಸೆಷನ್ ನ್ಯಾಯಾಲಯಕ್ಕೆ ಮನದಟ್ಟಾದರೆ, ಸದರಿ ಮೂವತ್ತು ದಿವಸಗಳ ಅವಧಿಯ ಮುಕ್ತಾಯದ ನಂತರವೂ ಅದು ಅಪೀಲನ್ನು ಪುರಸ್ಕರಿಸಬಹುದು.

(5) (3)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಅಪೀಲನ್ನು ಅಂಥ ಅಪೀಲು ಸಲ್ಲಿಸಿದ ದಿನಾಂಕದಿಂದ ಆರು ತಿಂಗಳೊಳಗೆ ಸೆಷನ್ ನ್ಯಾಯಾಲಯವು ವಿಚಾರಣೆ ಮಾಡತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

(6) ಸೆಷನ್ ನ್ಯಾಯಾಲಯವು, ಅಪೀಲನ್ನು ವಿಲೆ ಮಾಡುವುದನ್ನು ಇತ್ಯರ್ಥದಲ್ಲಿರಿಸಿ ಯಾವ ಶಿಕ್ಷೆಯ ಅಥವಾ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಶಿಕ್ಷೆಯನ್ನು ಅಥವಾ ಆದೇಶವನ್ನು ಅಮಾನತ್ತುಗೊಳಿಸಲು ನಿರ್ದೇಶಿಸಬಹುದು.

(7) (5)ನೇ ಉಪಪ್ರಕರಣದ ಮೇರೆಗಿನ ಸೆಷನ್ ನ್ಯಾಯಾಲಯದ ತೀರ್ಮಾನವೇ ಅಂತಿಮವಾಗಿರತಕ್ಕದ್ದು ಮತ್ತು ಸೆಷನ್ ನ್ಯಾಯಾಲಯದ ತೀರ್ಮಾನದ ವಿರುದ್ಧ ಅಪೀಲಿಗೆ ಅಥವಾ ಪುನರೀಕ್ಷಣೆಗೆ ಅವಕಾಶವಿರತಕ್ಕದ್ದಲ್ಲ:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಸಂವಿಧಾನದ 32ನೇ ಮತ್ತು 226ನೇ ಅನುಚ್ಛೇದಗಳ ಅಡಿಯಲ್ಲಿ ಲಭ್ಯವಿರುವ ನ್ಯಾಯಿಕ ಪರಿಹಾರಗಳನ್ನು ಪಡೆಯಲು ಯಾರೇ ವ್ಯಕ್ತಿಯನ್ನು ಅಡ್ಡಿಪಡಿಸತಕ್ಕದ್ದಲ್ಲ.

**34. ಸಿವಿಲ್ ಮೊಕದ್ದಮೆಗಳಲ್ಲಿ ಅಪೀಲು.–** (1) ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಮತ್ತು (2)ನೇ ಉಪಪ್ರಕರಣಕ್ಕೆ ಒಳಪಟ್ಟು, ಗ್ರಾಮ ನ್ಯಾಯಾಲಯದ ಪ್ರತಿಯೊಂದು ತೀರ್ಪಿನ ಅಥವಾ ವಾದಕಾಲೀನ ಆದೇಶವಾಗಿರದ ಯಾವುದೇ ಆದೇಶದ ವಿರುದ್ಧ ಜಿಲ್ಲಾ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು.

(2) ಗ್ರಾಮ ನ್ಯಾಯಾಲಯವು ಹೊರಡಿಸಿದ ಯಾವುದೇ ತೀರ್ಪಿನ ಅಥವಾ ಆದೇಶದ ವಿರುದ್ಧ,–

(ಎ) ಪಕ್ಷಕಾರರ ಸಮ್ಮತಿ ಪಡೆದು;

(ಬಿ) ದಾವೆಯ, ಕ್ಲೇಮಿನ, ವಿವಾದದ ವಸ್ತು ವಿಷಯದ ಮೊಬಲಗು ಅಥವಾ ಮೌಲ್ಯವು ಒಂದು ಸಾವಿರ ರೂಪಾಯಿಗಳನ್ನು ಮೀರದಿದ್ದರೆ;

(ಸಿ) ಕಾನೂನಿನ ಪ್ರಶ್ನೆಯನ್ನು ಹೊರತುಪಡಿಸಿ, ಅಂಥ ದಾವೆಯ, ಕ್ಲೇಮಿನ ಅಥವಾ ವಿವಾದದ ವಸ್ತು ವಿಷಯದ ಮೊಬಲಗು ಅಥವಾ ಮೌಲ್ಯವು ಐದು ಸಾವಿರ ರೂಪಾಯಿಗಳನ್ನು ಮೀರದಿದ್ದರೆ

– ಯಾವುದೇ ಅಪೀಲಿಗೆ ಅವಕಾಶವಿರತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು, ಗ್ರಾಮ ನ್ಯಾಯಾಲಯದ ತೀರ್ಪಿನ ಅಥವಾ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯೊಳಗೆ ಸಲ್ಲಿಸತಕ್ಕದ್ದು:

ಪರಂತು, ಸದರಿ ಅವಧಿಯೊಳಗೆ ಅಪೀಲನ್ನು ಸಲ್ಲಿಸದಿರುವುದಕ್ಕೆ ಅಪೀಲುದಾರನಿಗೆ ಸಾಕಷ್ಟು ಕಾರಣಗಳಿದ್ದವೆಂದು ಜಿಲ್ಲಾ ನ್ಯಾಯಾಲಯಕ್ಕೆ ಮನದಟ್ಟಾದರೆ, ಅದು ಸದರಿ ಮೂವತ್ತು ದಿವಸಗಳ ಅವಧಿಯ ಮುಕ್ತಾಯದ ತರುವಾಯವೂ ಅಪೀಲನ್ನು ಪುರಸ್ಕರಿಸಬಹುದು.

(4) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಅಪೀಲನ್ನು, ಅಪೀಲನ್ನು ಸಲ್ಲಿಸಿದ ದಿನಾಂಕದಿಂದ ಆರು ತಿಂಗಳೊಳಗೆ ಜಿಲ್ಲಾ ನ್ಯಾಯಾಲಯವು ವಿಚಾರಣೆ ಮಾಡತಕ್ಕದ್ದು ಮತ್ತು ವಿಲೇ ಮಾಡತಕ್ಕದ್ದು.

(5) ಜಿಲ್ಲಾ ನ್ಯಾಯಾಲಯವು, ಅಪೀಲು ಇತ್ಯರ್ಥವಾಗುವ ತನಕ, ಯಾವ ತೀರ್ಪಿನ ಅಥವಾ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ತೀರ್ಪಿನ ಅಥವಾ ಆದೇಶದ ಜಾರಿಯನ್ನು ತಡೆಹಿಡಿಯಬಹುದು.

(6) (4)ನೇ ಉಪಪ್ರಕರಣದ ಮೇರೆಗಿನ ಜಿಲ್ಲಾ ನ್ಯಾಯಾಲಯದ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಜಿಲ್ಲಾ ನ್ಯಾಯಾಲಯದ ತೀರ್ಮಾನದ ವಿರುದ್ಧ ಯಾವುದೇ ಅಪೀಲಿಗೆ ಅಥವಾ ಪುನರೀಕ್ಷಣೆಗೆ ಅವಕಾಶ ಇರತಕ್ಕದ್ದಲ್ಲ:

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಸಂವಿಧಾನದ 32ನೇ ಮತ್ತು 226ನೇ ಅನುಚ್ಛೇಧಗಳ ಅಡಿಯಲ್ಲಿ ಲಭ್ಯವಿರುವ ನ್ಯಾಯಿಕ ಪರಿಹಾರಗಳನ್ನು ಪಡೆಯಲು ಯಾರೇ ವ್ಯಕ್ತಿಗೆ ಅಡ್ಡಿಯುಂಟುಮಾಡತಕ್ಕದ್ದಲ್ಲ.

## ಅಧ್ಯಾಯ – VIII
## ಸಂಕೀರ್ಣ

**35. ಗ್ರಾಮ ನ್ಯಾಯಾಲಯಗಳಿಗೆ ಪೋಲೀಸರ ನೆರವು.–** (1) ಗ್ರಾಮ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ ಕಾರ್ಯನಿರ್ವಹಿಸುವ ಪ್ರತಿಯೊಬ್ಬ ಪೋಲೀಸ್ ಅಧಿಕಾರಿಯು, ಗ್ರಾಮ ನ್ಯಾಯಾಲಯವು ತನ್ನ ಕಾನೂನುಬದ್ಧ ಅಧಿಕಾರವನ್ನು ಚಲಾಯಿಸುವಾಗ ಅದಕ್ಕೆ ನೆರವು ನೀಡುವುದಕ್ಕೆ ಬದ್ಧನಾಗಿರತಕ್ಕದ್ದು.

(2) ಗ್ರಾಮ ನ್ಯಾಯಾಲಯವು, ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಕಂದಾಯ ಅಧಿಕಾರಿಯನ್ನು ಅಥವಾ ಪೋಲೀಸ್ ಅಧಿಕಾರಿಯನ್ನು ಅಥವಾ ಸರ್ಕಾರಿ ನೌಕರನನ್ನು ಗ್ರಾಮ ನ್ಯಾಯಾಲಯಕ್ಕೆ ನೆರವು ನೀಡುವಂತೆ ನಿರ್ದೇಶಿಸಿದಾಗಲೆಲ್ಲಾ ಅವನು ಅಂಥ ನೆರವನ್ನು ಒದಗಿಸಲು ಬದ್ಧನಾಗಿರತಕ್ಕದ್ದು.

**36. ನ್ಯಾಯಾಧಿಕಾರಿಗಳು ಮತ್ತು ನೌಕರರು, ಮುಂತಾದವರು ಲೋಕ ನೌಕರರಾಗಿರುವುದು.–** ಗ್ರಾಮ ನ್ಯಾಯಾಲಯಗಳ ನ್ಯಾಯಾಧಿಕಾರಿಗಳು ಮತ್ತು ಅಧಿಕಾರಿಗಳು ಮತ್ತು ಇತರ ನೌಕರರು ಈ ಅಧಿನಿಯಮದ ಯಾವುದೇ ಉಪಬಂಧಗಳ ಅನುಸಾರವಾಗಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ

ಕಾರ್ಯನಿರ್ವಹಿಸುತ್ತಿರುವರೆಂದು ತಾತ್ಪರ್ಯವಾಗುವಾಗ, ಭಾರತ ದಂಡ ಸಂಹಿತೆ (1860ರ 5)ಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರಾಗಿರುವುದಾಗಿ ಭಾವಿಸತಕ್ಕದ್ದು.

**37. ಗ್ರಾಮ ನ್ಯಾಯಾಲಯಗಳ ತಪಾಸಣೆ.–** ಉಚ್ಚ ನ್ಯಾಯಾಲಯವು, ನ್ಯಾಯಾಧಿಕಾರಿಯ ದರ್ಜೆಗಿಂತ ವರಿಷ್ಠ ದರ್ಜೆಯ ಯಾರೇ ನ್ಯಾಯಿಕ ಅಧಿಕಾರಿಯನ್ನು ಪ್ರತಿ ಆರು ತಿಂಗಳುಗಳಿಗೆ ಒಂದು ಬಾರಿ ಅಥವಾ ಉಚ್ಚ ನ್ಯಾಯಾಲಯವು ನಿಯಮಿಸಿದಂಥ ಇತರ ಅವಧಿಯೊಳಗೆ ತನ್ನ ಅಧಿಕಾರ ವ್ಯಾಪ್ತಿಯಲ್ಲಿನ ಗ್ರಾಮ ನ್ಯಾಯಾಲಯಗಳ ತಪಾಸಣೆ ಮಾಡಲು ಮತ್ತು ಅವನು ಅವಶ್ಯವೆಂದು ಭಾವಿಸುವಂಥ ಸೂಚನೆಗಳನ್ನು ನೀಡಲು ಮತ್ತು ಉಚ್ಚ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ಅಧಿಕೃತಗೊಳಿಸಬಹುದು.

**38. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅದಕ್ಕೆ ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರುವಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಮೂರು ವರ್ಷಗಳು ಮುಗಿದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**39. ನಿಯಮಗಳನ್ನು ರಚಿಸಲು ಉಚ್ಚ ನ್ಯಾಯಾಲಯದ ಅಧಿಕಾರ.–** (1) ಉಚ್ಚ ನ್ಯಾಯಾಲಯವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧಿಸಬಹುದು, ಎಂದರೆ:–

(ಎ) 10ನೇ ಪ್ರಕರಣದ ಮೇರೆಗೆ ಗ್ರಾಮ ನ್ಯಾಯಾಲಯದ ಮೊಹರಿನ ನಮೂನೆ ಮತ್ತು ಅಳತೆಗಳು;

(ಬಿ) 24ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ದಾವೆಯನ್ನು, ಕ್ಲೇಮನ್ನು ಅಥವಾ ವ್ಯವಹರಣೆಯನ್ನು ಹೂಡುವುದಕ್ಕಾಗಿ ನಮೂನೆ, ರೀತಿ ಮತ್ತು ಫೀಜು;

(ಸಿ) 24ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಎದುರು ಪಕ್ಷಕಾರನಿಗೆ ಸಮನುಗಳನ್ನು ಜಾರಿ ಮಾಡುವ ರೀತಿ;

(ಡಿ) 26ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಂಧಾನದ ಪ್ರಕ್ರಿಯೆ;

(ಇ) 27ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಂಧಾನಕಾರರ ಅರ್ಹತೆಗಳು ಮತ್ತು ಅನುಭವ;

(ಎಫ್) 37ನೇ ಪ್ರಕರಣದ ಮೇರೆಗೆ ಗ್ರಾಮ ನ್ಯಾಯಾಲಯಗಳ ತಪಾಸಣೆಗಾಗಿ ಅವಧಿ.

(3) ಉಚ್ಚ ನ್ಯಾಯಾಲಯವು ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

**40. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧಿಸಬಹುದು, ಎಂದರೆ:–

(ಎ) 17ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಗ್ರಾಮ ನ್ಯಾಯಾಲಯದ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಬಿ) 27ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಂಧಾನಕಾರರಿಗೆ ಸಂದಾಯ ಮಾಡಬೇಕಾದ ಉಪವೇಶನ ಶುಲ್ಕ ಮತ್ತು ಇತರ ಭತ್ಯೆಗಳು ಮತ್ತು ಅವರನ್ನು ನೇಮಕ ಮಾಡಿಕೊಳ್ಳುವುದಕ್ಕಾಗಿ ಇರುವ ಇತರ ನಿಬಂಧನೆಗಳು ಮತ್ತು ಷರತ್ತುಗಳು;

(3) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಇಡತಕ್ಕದ್ದು.

## ಒಂದನೇ ಅನುಸೂಚಿ
**(12 ಮತ್ತು 14ನೇ ಪ್ರಕರಣಗಳನ್ನು ನೋಡಿ)**
**ಭಾಗ– I**

**ಭಾರತ ದಂಡ ಸಂಹಿತೆ (1860ರ 45) ರ ಮೇರೆಗಿನ ಅಪರಾಧ, ಮುಂತಾದವುಗಳು**

(i) ಮರಣ ದಂಡನೆ, ಆಜೀವ ಕಾರಾವಾಸ ಅಥವಾ ಎರಡು ವರ್ಷಗಳಿಗೆ ಮೀರಿದ ಅವಧಿಯ ಕಾರಾವಾಸದಿಂದ ದಂಡನೀಯವಲ್ಲದ ಅಪರಾಧಗಳು;

(ii) ಭಾರತ ದಂಡ ಸಂಹಿತೆ (1860ರ 45) ರ ಪ್ರಕರಣ 379, ಪ್ರಕರಣ 380 ಅಥವಾ ಪ್ರಕರಣ 381ರ ಮೇರೆಗೆ ಕಳವು – ಕಳವು ಮಾಡಿದ ಸ್ವತ್ತಿನ ಮೌಲ್ಯವು ಇಪ್ಪತ್ತು ಸಾವಿರ ರೂಪಾಯಿಗಳಿಗೆ ಮೀರದಿರುವಲ್ಲಿ;

(iii) ಭಾರತ ದಂಡ ಸಂಹಿತೆ (1860ರ 45) ರ 411ನೇ ಪ್ರಕರಣದ ಮೇರೆಗೆ, ಕಳವು ಮಾಡಿದ ಸ್ವತ್ತನ್ನು ಸ್ವೀಕರಿಸುವುದು ಅಥವಾ ಇಟ್ಟುಕೊಳ್ಳುವುದು – ಅಂಥ ಸ್ವತ್ತಿನ ಮೌಲ್ಯವು ಇಪ್ಪತ್ತು ಸಾವಿರ ರೂಪಾಯಿಗಳಿಗೆ ಮೀರದಿರುವಲ್ಲಿ;

(iv) ಭಾರತ ದಂಡ ಸಂಹಿತೆ (1860ರ 45) ರ 414ನೇ ಪ್ರಕರಣದ ಮೇರೆಗೆ, ಕಳವು ಮಾಡಿದ ಸ್ವತ್ತನ್ನು ಬಚ್ಚಿಡುವಲ್ಲಿ ಅಥವಾ ವಿಲೆ ಮಾಡುವಲ್ಲಿ ನೆರವು ನೀಡುವುದು – ಅಂಥ ಸ್ವತ್ತಿನ ಮೌಲ್ಯವು ಇಪ್ಪತ್ತು ಸಾವಿರ ರೂಪಾಯಿಗಳಿಗೆ ಮೀರದಿರುವಲ್ಲಿ;

(v) ಭಾರತ ದಂಡ ಸಂಹಿತೆ (1860ರ 45)ರ 454ನೇ ಮತ್ತು 456ನೇ ಪ್ರಕರಣಗಳ ಮೇರೆಗಿನ ಅಪರಾಧಗಳು;

(vi) ಭಾರತ ದಂಡ ಸಂಹಿತೆ (1860ರ 45)ರ 504ನೇ ಪ್ರಕರಣದ ಮೇರೆಗೆ, ಶಾಂತಿಭಂಗ ಮಾಡುವುದಕ್ಕೆ ಉದ್ರೇಕಿಸುವ ಉದ್ದೇಶದಿಂದ ಅವಮಾನ ಮಾಡುವುದು ಮತ್ತು 506ನೇ ಪ್ರಕರಣದ ಮೇರೆಗೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾದ ಆಪರಾಧಿಕ ಭಯೋತ್ಪಾದನೆ;

(vii) ಪೂರ್ವೋಕ್ತ ಅಪರಾಧಗಳ ಪೈಕಿ ಯಾವುದೇ ಅಪರಾಧದ ದುಷ್ಪ್ರೇರಣೆ;

(viii) ಪೂರ್ವೋಕ್ತ ಅಪರಾಧಗಳ ಪೈಕಿ ಯಾವುದೇ ಅಪರಾಧವನ್ನು ಮಾಡಲು ಪ್ರಯತ್ನಿಸುವುದು, ಅಂಥ ಪ್ರಯತ್ನವು ಒಂದು ಅಪರಾಧವಾಗಿರುವಾಗ.

## ಭಾಗ – II

## ಇತರ ಕೇಂದ್ರ ಅಧಿನಿಯಮಗಳ ಮೇರೆಗಿನ ಅಪರಾಧಗಳು ಮತ್ತು ಪರಿಹಾರ

(i) ಯಾವ ಕೃತ್ಯದ ಸಂಬಂಧದಲ್ಲಿ ದನಗಳ ಅತಿಕ್ರಮ ಪ್ರವೇಶ ಅಧಿನಿಯಮ, 1871 (1871ರ 1)ರ 20ನೇ ಪ್ರಕರಣದ ಮೇರೆಗೆ ದೂರನ್ನು ಸಲ್ಲಿಸಬಹುದೋ ಆ ಕೃತ್ಯದಿಂದಾದ ಯಾವುದೇ ಅಪರಾಧ;

(ii) ಮಜೂರಿ ಸಂದಾಯ ಅಧಿನಿಯಮ, 1936 (1936ರ 4);

(iii) ಕನಿಷ್ಠ ಮಜೂರಿ ಅಧಿನಿಯಮ, 1948 (1948ರ 11);

(iv) ನಾಗರಿಕ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1955 (1955ರ 22)

(v) ದಂಡ ಪ್ರಕ್ರಿಯಾ ಸಂಹಿತೆ (1974ರ 2) ಯ ಅಧ್ಯಾಯ IX ರ ಮೇರೆಗೆ ಹೆಂಡತಿಯರ, ಮಕ್ಕಳ ಮತ್ತು ತಂದೆ ತಾಯಿಯರ ಜೀವನಾಂಶಕ್ಕಾಗಿ ಆದೇಶ;

(vi) ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನೆ) ಅಧಿನಿಯಮ, 1976 (1976ರ 19);

(vii) ಸಮಾನ ಪರಿಶ್ರಮ ಧನ ಅಧಿನಿಯಮ, 1976 (1976ರ 25);

(viii) ಗೃಹಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 (2005ರ 43).

## ಭಾಗ– III

## ರಾಜ್ಯ ಅಧಿನಿಯಮಗಳ ಮೇರೆಗಿನ ಅಪರಾಧಗಳು ಮತ್ತು ಪರಿಹಾರ

(ರಾಜ್ಯ ಸರ್ಕಾರವು ಅಧಿಸೂಚಿಸುವುದು)

**ಎರಡನೇ ಅನುಸೂಚಿ**

**(13 ಮತ್ತು 14ನೇ ಪ್ರಕರಣಗಳನ್ನು ನೋಡಿ)**

**ಭಾಗ– I**

**ಗ್ರಾಮ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಸಿವಿಲ್ ಸ್ವರೂಪದ ದಾವೆಗಳು**

**(i) ಸಿವಿಲ್ ವಿವಾದಗಳು:**

(ಎ) ಆಸ್ತಿ ಖರೀದಿ ಹಕ್ಕು;

(ಬಿ) ಸಾಮಾನ್ಯ ಹುಲ್ಲುಗಾವಲಿನ ಬಳಕೆ;

(ಸಿ) ನೀರಾವರಿ ಕಾಲುವೆಯಿಂದ ನೀರನ್ನು ಪಡೆಯುವ ಬಗ್ಗೆ ವಿನಿಯಮನ ಮತ್ತು ಸಮಯ.

**(ii) ಆಸ್ತಿ ವಿವಾದಗಳು**

(ಎ) ಗ್ರಾಮ ಮತ್ತು ತೋಟದ ಮನೆಗಳು (ಸ್ವಾಧೀನತೆ);

(ಬಿ) ನೀರಿನ ಕಾಲುವೆಗಳು;

(ಸಿ) ಬಾವಿ ಅಥವಾ ಕೊಳವೆ ಬಾವಿಯಿಂದ ನೀರನ್ನು ಪಡೆಯುವ ಹಕ್ಕು.

**(iii) ಇತರ ವಿವಾದಗಳು**

(ಎ) ಮಜೂರಿ ಸಂದಾಯ ಅಧಿನಿಯಮ, 1936 (1936ರ 4)ರ ಮೇರೆಗಿನ ಕ್ಲೇಮುಗಳು;

(ಬಿ) ಕನಿಷ್ಠ ಮಜೂರಿ ಅಧಿನಿಯಮ, 1948 (1948ರ 11)ರ ಮೇರೆಗಿನ ಕ್ಲೇಮುಗಳು;

(ಸಿ) ವ್ಯಾಪಾರ ವಹಿವಾಟಿನಿಂದ ಅಥವಾ ಹಣ ಸಾಲ ನೀಡುವುದರಿಂದ ಉದ್ಭವಿಸುವ ಹಣ ಸಂಬಂಧಿ ದಾವೆಗಳು;

(ಡಿ) ಭೂ ಸಾಗುವಳಿಯಲ್ಲಿ ಪಾಲುದಾರಿಕೆಯಿಂದ ಉದ್ಭವಿಸುವ ವಿವಾದಗಳು;

(ಇ) ಗ್ರಾಮ ಪಂಚಾಯಿತಿಗಳ ನಿವಾಸಿಗಳು ಅರಣ್ಯ ಉತ್ಪನ್ನಗಳನ್ನು ಬಳಸುವುದಕ್ಕೆ ಸಂಬಂಧಿಸಿದ ವಿವಾದಗಳು.

## ಭಾಗ – II

## 14ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಅಧಿಸೂಚಿಸಿದ ಕೇಂದ್ರ ಅಧಿನಿಯಮಗಳ ಮೇರೆಗಿನ ಕ್ಲೇಮುಗಳು ಮತ್ತು ವಿವಾದಗಳು

(ಕೇಂದ್ರ ಸರ್ಕಾರವು ಅಧಿಸೂಚಿಸುವುದು)

## ಭಾಗ– III

## ರಾಜ್ಯ ಸರ್ಕಾರವು 14ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಅಧಿಸೂಚಿಸಿದ ರಾಜ್ಯ ಅಧಿನಿಯಮಗಳ ಮೇರೆಗಿನ ಕ್ಲೇಮುಗಳು ಮತ್ತು ವಿವಾದಗಳು.

(ರಾಜ್ಯ ಸರ್ಕಾರವು ಅಧಿಸೂಚಿಸುವುದು)

** ** **

Govt. Press, Bangalore, P7, W.D:283 , Copies: 150